# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಗುರುವಾರ, ಜೂನ್ 3, 2021

ಸಂಪುಟ : 48 ಸಂಚಿಕೆ : 20 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com




**ಬಿತ್ತನೆಗೆ ತಯಾರಿ** ಜಿಲ್ಲೆಯಲ್ಲಿ ಈಗಾಗಲೇ ಮುಂಗಾರು ಪೂರ್ವ ಮಳೆ ಉತ್ತಮವಾಗಿದ್ದು, ಮುಂಗಾರು ಹಂಗಾಮಿಗೆ ಬಿತ್ತನೆ ಮಾಡಲು ರೈತರು ಭೂಮಿ ಹದ ಮಾಡುವಲ್ಲಿ ನಿರತರಾಗಿದ್ದಾರೆ. ದಾವಣಗೆರೆ ತಾಲ್ಲೂಕು ಆಲೂರುಹಟ್ಟಿ ಗ್ರಾಮದ ಜಮೀನಿನಲ್ಲಿ ಕಂಡು ಬಂದ ದೃಶ್ಯ.

# ಮಾದರಿ ಬಾಡಿಗೆ ಕಾಯ್ದೆಗೆ ಅಸ್ತು

## ಮನೆ ಮಾಲೀಕರು-ಬಾಡಿಗೆದಾರರ ಹಿತ ಕಾಯುವುದು ಕೇಂದ್ರದ ಉದ್ದೇಶ

ನವದೆಹಲಿ, ಜೂ. 2 – ಮನೆಗಳನ್ನು ಬಾಡಿಗೆ ನೀಡುವ ವಲಯದಲ್ಲಿ ವ್ಯಾಪಕ ಸುಧಾರಣೆ ತರುವ ಮಾದರಿ ಬಾಡಿಗೆ ಕಾಯ್ದೆಗೆ ಕೇಂದ್ರ ಸಂಪುಟ ಅನುಮೋದನೆ ನೀಡಿದೆ. ಈ ಮೂಲಕ ಪ್ರತ್ಯೇಕ ಬಾಡಿಗೆ ಪ್ರಾಧಿಕಾರ, ಕೋರ್ಟ್ ಹಾಗೂ ಟ್ರಿಬ್ಯೂನಲ್‌ಗಳನ್ನು ಪ್ರತಿಯೊಂದು ಜಿಲ್ಲೆಯಲ್ಲಿ ಸ್ಥಾಪಿಸುವ ಮೂಲಕ ಮನೆ ಮಾಲೀಕರು ಹಾಗೂ ಬಾಡಿಗೆದಾರರಿಬ್ಬರ ಹಿತ ಕಾಯಲು ಸರ್ಕಾರ ಉದ್ದೇಶಿಸಿದೆ.

ಈ ಕಾಯ್ದೆಯ ಅನ್ವಯ, ಬಾಡಿಗೆದಾರರು ಎರಡು ತಿಂಗಳ ಬಾಡಿಗೆಯನ್ನು ಭದ್ರತಾ ಠೇವಣಿಯಾಗಿ ಸಲ್ಲಿಸಬೇಕಾಗುತ್ತದೆ. ವಾಣಿಜ್ಯ ಆಸ್ತಿಗಳಿಗೆ ಈ ಮೊತ್ತ ಆರು ತಿಂಗಳ ಬಾಡಿಗೆಯಾಗಿದೆ.

ರಾಜ್ಯಗಳು ಮಾದರಿ ಬಾಡಿಗೆ ಕಾಯ್ದೆಯನ್ನು ಹೊಸ ಶಾಸನದ ಮೂಲಕ ಜಾರಿಗೆ ತರಬಹುದು ಇಲ್ಲವೇ ಈಗಿರುವ ಬಾಡಿಗೆ ಕಾಯ್ದೆಗಳಿಗೆ ಸೂಕ್ತ ರೀತಿಯಲ್ಲಿ ತಿದ್ದುಪಡಿ ತರಬಹುದು.

ಸರ್ಕಾರದ ಕ್ರಮದಿಂದಾಗಿ ಬಾಡಿಗೆ ಮನೆ ವಲಯವನ್ನು ಔದ್ಯಮಿಕ ಮಾದರಿಯಾಗಿ ಪರಿಗಣಿಸುವ ಮತ್ತು ಬಾಡಿಗೆ ಮನೆಗಳ ಕೊರತೆ



**ಅವಧಿ ಮೀರಿ ಮನೆ ಬಿಡದಿದ್ದರೆ ಎರಡು ಪಟ್ಟು ಬಾಡಿಗೆ**

**ಮಾಲೀಕ ಹಣ ವಾಪಸ್ ಕೊಡದಿದ್ದರೆ ಸರಳ ಬಡ್ಡಿ**

ಪಡೆದಿರುವವರ ಮೇಲೆ ಪರಿಣಾಮ ಬೀರುವುದಿಲ್ಲ. ಬಾಡಿಗೆ ಹಾಗೂ ಬಾಡಿಗೆಯ ಅವಧಿಯನ್ನು ಪರಸ್ಪರ ಸಮ್ಮತಿಯ ಮೇಲೆ ಮಾಲೀಕರು ಹಾಗೂ ಬಾಡಿಗೆದಾರರು ನಿರ್ಧರಿಸಿಕೊಳ್ಳಬೇಕಿದೆ.

ಬಾಡಿಗೆದಾರರು ಒಪ್ಪಂದದ ಪ್ರಕಾರ ಮನೆ ಬಿಟ್ಟು ಕೊಡದೇ ಹೋದರೆ ಅವರು ಅವಧಿ ಮೀರಿದ ಮೊದಲ ಎರಡು ತಿಂಗಳು ದುಪ್ಪಟ್ಟು ಬಾಡಿಗೆ ಪಾವತಿಸಬೇಕಾಗುತ್ತದೆ. ನಂತರದಲ್ಲಿ ಬಾಡಿಗೆಯ ಮೊತ್ತ ನಾಲ್ಕು ಪಟ್ಟು ಹೆಚ್ಚಾಗಲಿದೆ.

ಮನೆ ಮಾಲೀಕ ಬಾಕಿ ವಾಪಸ್ ಕೊಡಲು ವಿಫಲವಾದರೆ, ಸರಳ ಬಡ್ಡಿ ದರ ನೀಡಬೇಕಾಗುತ್ತದೆ. ಈ ಬಡ್ಡಿ ದರವನ್ನು ಕಾಲ ಕಾಲಕ್ಕೆ ನಿಗದಿ ಪಡಿಸಲಾಗುವುದು.

ಉಭಯರ ನಡುವೆ ತಗಾದೆ ಉಂಟಾದರೆ ಅವರು ಮೊದಲು ಬಾಡಿಗೆ ಪ್ರಾಧಿಕಾರದ ಬಳಿ ಅರ್ಜಿ ಸಲ್ಲಿಸಬೇಕಿದೆ. ನಂತರ ಅವರು ಬಾಡಿಗೆ ನ್ಯಾಯಾಲಯ ಹಾಗೂ ಬಾಡಿಗೆ ಟ್ರಿಬ್ಯೂನಲ್‌ಗಳಲ್ಲಿ ಅರ್ಜಿ ಸಲ್ಲಿಸಬಹುದು

ಈ ಬಗ್ಗೆ ಹೇಳಿಕೆ ನೀಡಿರುವ ಕೇಂದ್ರ ವಸತಿ ಸಚಿವ ಹರ್‌ದೀಪ್ ಸಿಂಗ್ ಪುರಿ, ಸರ್ಕಾರದ ಕ್ರಮದಿಂದ ದೇಶಾದ್ಯಂತ ಇರುವ ಬಾಡಿಗೆ ಮನೆಗಳಿಗೆ ಕಾನೂನು ಚೌಕಟ್ಟು ದೊರೆಯಲಿದೆ ಎಂದಿದ್ದಾರೆ. 2011ರ ಜನಗಣತಿಯ ಪ್ರಕಾರ ದೇಶಾ ದ್ಯಂತ ಇರುವ ನಗರ ಪ್ರದೇಶಗಳಲ್ಲಿ ಕೋಟಿಗೂ ಹೆಚ್ಚು ಮನೆಗಳು (2ನೇ ಪುಟಕ್ಕೆ)

# ಕೇಂದ್ರದ ಲಸಿಕಾ ನೀತಿ ವಿವೇಚನಾ ರಹಿತ

ನವದವೆಹಲಿ, ಜೂ. 2 – ಕೇಂದ್ರ ಸರ್ಕಾರದ ಕೊರೊನಾ ಲಸಿಕಾ ನೀತಿ ವಿವೇಚನಾ ರಹಿತವಾಗಿದೆ ಎಂದು ತರಾಟೆಗೆ ತೆಗೆದುಕೊಂಡಿರುವ ಸುಪ್ರೀಂ ಕೋರ್ಟ್, ನಾಗರಿಕರ ಸಂವಿಧಾನಿಕ ಹಕ್ಕುಗಳು ಕಾರ್ಯಾಂಗದ ನೀತಿಯಿಂದ ಉಲ್ಲಂಘನೆಯಾದಾಗ ನ್ಯಾಯಾಲಯ ಮೂಕ ಪ್ರೇಕ್ಷಕನಾಗಿರದು ಎಂದು ಹೇಳಿದೆ.

45ಕ್ಕೂ ಹೆಚ್ಚಿನ ವಯೋಮಾನದವರಿಗೆ ಉಚಿತ ಲಸಿಕೆ ನೀಡುವಾಗ, 18-44ರ ವಯೋಮಾನದವರು ಲಸಿಕೆಗಾಗಿ ಹಣ ನೀಡಬೇಕು ಎಂದು ಹೇಳುವುದು ಮೇಲ್ನೋಟಕ್ಕೆ ವಿವೇಚನಾ ರಹಿತ ಹಾಗೂ ಅತಾರ್ಕಿಕ ಎಂಬುದು ಕಂಡು ಬರುತ್ತದೆ. ಈ ನೀತಿಯ ಮರು ಪರಿಶೀಲನೆ ಮಾಡಬೇಕು ಎಂದು ಆದೇಶಿಸಿದೆ.

ಸರ್ಕಾರದ ಲಸಿಕಾ ನೀತಿಯನ್ನು ಪರಿಶೀಲಿಸುವುದಾಗಿ ಹೇಳಿರುವ ನ್ಯಾಯಾಲಯ,

**ಲಸಿಕೆಗಾಗಿ ಹಣ ಕೇಳುತ್ತಿರುವುದಕ್ಕೆ ಸುಪ್ರೀಂ ಕೋರ್ಟ್ ತರಾಟೆ**

ಲಸಿಕೆಗಾಗಿ ನಿಗದಿ ಪಡಿಸಲಾದ 35 ಸಾವಿರ ಕೋಟಿ ರೂ.ಗಳಲ್ಲಿ ಈವರೆಗೂ ಮಾಡಿರುವ ವೆಚ್ಚದ ವಿವರವನ್ನು ಎಲ್ಲಾ ದಾಖಲೆಗಳು ಹಾಗೂ ಟಿಪ್ಪಣಿಗಳ ಸಮೇತ ಸಲ್ಲಿಸುವಂತೆ ತಿಳಿಸಿದೆ.

ಮೇ 31ರಂದು ಸುಪ್ರೀಂ ಕೋರ್ಟ್ ಈ ಬಗ್ಗೆ ಆದೇಶ ಹೊರಡಿಸಿದ್ದು, ಅದನ್ನು ಬುಧವಾರ ನ್ಯಾಯಾಲಯದ ವೆಬ್ ತಾಣದಲ್ಲಿ ಪ್ರಕಟಿಸಲಾಗಿದೆ. ಇದರಲ್ಲಿ ಕೇಂದ್ರ ಸರ್ಕಾರ ಲಸಿಕಾ ನೀತಿಯನ್ನು ಉದಾರೀಕರಣಗೊಳಿಸಿ ಕೇಂದ್ರ, ರಾಜ್ಯ ಹಾಗೂ ಖಾಸಗಿ ಆಸ್ಪತ್ರೆಗಳಿಗೆ ಬೇರೆ ಬೇರೆ ದರ ನಿಗದಿ ಪಡಿಸಿರುವುದನ್ನು ನ್ಯಾಯಾಲಯ ಟೀಕಿಸಿದೆ.

ಕೊವಿನ್ ಆಪ್ ತಾಣದಲ್ಲಿ ಲಸಿಕೆ ನೋಂದಣಿ ಮಾಡಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಿರುವ ಕ್ರಮಕ್ಕೂ ನ್ಯಾಯಾಲಯ ಆಕ್ಷೇಪಿಸಿದ್ದು, ಇದು ನಗರ ಹಾಗೂ ಗ್ರಾಮೀಣ ಭಾರತದ ನಡುವೆ ಡಿಜಿಟಲ್ ವಿಭಜನೆ ತರುತ್ತದೆ. ಈ ಬಗ್ಗೆ ಎರಡು ವಾರಗಳಲ್ಲಿ ಸರ್ಕಾರ ಉತ್ತರಿಸಬೇಕು ಎಂದು ನ್ಯಾಯಾಲಯ ಹೇಳಿದೆ.

ಸುಪ್ರೀಂ ಕೋರ್ಟ್ ಎದುರು ಪ್ರಮಾಣ ಪತ್ರ ಸಲ್ಲಿಸಿದ್ದ ಕೇಂದ್ರ ಸರ್ಕಾರ, ನೀತಿ ರೂಪಿಸುವ ವಿಷಯದಲ್ಲಿ ನ್ಯಾಯಾಂಗ ಪ್ರವೇಶಿಸಬಾರದು ಎಂದು ಹೇಳಿತ್ತು. ಇದನ್ನು ತರಾಟೆಗೆ ತೆಗೆದು ಕೊಂಡಿರುವ ನ್ಯಾಯಾಲಯ, ಕಾರ್ಯಾಂಗದ ನೀತಿಗಳಿಂದ ನಾಗರಿಕರ ಸಂವಿಧಾನಿಕ ಹಕ್ಕುಗಳು ಉಲ್ಲಂಘನೆಯಾದಾಗ ನ್ಯಾಯಾಲಯಗಳು ಮೂಕ ಪ್ರೇಕ್ಷಕವಾಗಿರಬೇಕು ಎಂದು (2ನೇ ಪುಟಕ್ಕೆ)


# ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷೆ ರದ್ದುಗೊಳಿಸಲು ರಾಜ್ಯದ ಒಲವು

ಬೆಂಗಳೂರು, ಜೂ. 2 - ದ್ವಿತೀಯ ಪಿಯುಸಿ ಹಾಗೂ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಗಳನ್ನು ರದ್ದುಗೊಳಿಸಲು ಸರ್ಕಾರ ಬಯಸಿದೆ. ಪ್ರಧಾನಿ ನರೇಂದ್ರ ಮೋದಿ ಅವರು, ಕೇಂದ್ರೀಯ ಪರೀಕ್ಷಾ ಮಂಡಳಿಯ (ಸಿಬಿಎಸ್‌ಇ) 12ನೇ ತರಗತಿಯ ಪರೀಕ್ಷೆಗಳನ್ನು ರದ್ದು ಮಾಡುವ ನಿರ್ಧಾರವನ್ನು ತೆಗೆದುಕೊಂಡಿದ್ದಾರೆ.

ಪ್ರಧಾನಿಯವರೇ ವಿದ್ಯಾರ್ಥಿಗಳ ಸ್ನೇಹಿ ನಿರ್ಧಾರವನ್ನು ಕೈಗೊಂಡಿರುವಾಗ ಬಿಜೆಪಿ ನೇತೃತ್ವದ ಕರ್ನಾಟಕ ಸರ್ಕಾರದಲ್ಲಿ ಅವರ ವಿರುದ್ಧ ಹೋಗಿ ಪರೀಕ್ಷೆ ನಡೆಸಲು ಸಾಧ್ಯವಿಲ್ಲ ಎಂಬ ನಿರ್ಧಾರಕ್ಕೆ ರಾಜ್ಯ ಸರ್ಕಾರ ಬಂದಿದೆ.

ಪರೀಕ್ಷೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗೆ ಸಂಬಂಧಿಸಿದಂತೆ ಇಂದು ಬೆಳಿಗ್ಗೆ ಉನ್ನತ ಶಿಕ್ಷಣ ಇಲಾಖೆ ಹೊಂದಿರುವ ಉಪಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥ್‌ನಾರಾಯಣ ಹಾಗೂ ಪ್ರಾಥಮಿಕ, ಪ್ರೌಢ ಶಿಕ್ಷಣ ಸಚಿವರು ಈ ಸಂಬಂಧ ಸುದೀರ್ಘವಾಗಿ ಚರ್ಚೆ ನಡೆಸಿದರು.

ಪ್ರಧಾನಿಯವರು ತೆಗೆದುಕೊಂಡಿರುವ ನಿಲುವಿಗೆ ವಿರುದ್ಧವಾಗಿ ಪರೀಕ್ಷೆ ನಡೆಸಲು



ಸಾಧ್ಯವಿಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದಾರೆ.

ಈ ಸಂಬಂಧ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರೊಟ್ಟಿಗೆ ಉಭಯ ಸಚಿವರುಗಳು ಸಮಾಲೋಚನೆ ನಡೆಸಿ, ಅಧಿಕೃತವಾಗಿ ಪ್ರಕಟಣೆ ಮಾಡಲಿದ್ದಾರೆ.

ಕೊರೊನಾದಿಂದ ರಾಜ್ಯದಲ್ಲಿ ಅನಿಶ್ಚಿತ ಸ್ಥಿತಿ ಇದೆ. ಇಂತಹ ಸಂದರ್ಭದಲ್ಲಿ ಪರೀಕ್ಷೆಗಳನ್ನು ನಡೆಸುವುದು ಸೂಕ್ತವಲ್ಲ. ರಾಜ್ಯದಲ್ಲಿ ಎರಡನೇ ಅಲೆ ಅಬ್ಬರಕ್ಕೆ ಶಾಲಾ-ಕಾಲೇಜುಗಳು ಆರಂಭವಾದದ್ದೂ ಒಂದು ಕಾರಣ.

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆ ರದ್ದು ಮಾಡಿದ ನಂತರ ಪ್ರೌಢ ಶಿಕ್ಷಣ ಮಂಡಳಿ ಹಾಗೂ ಪಿಯು ಮಂಡಳಿ ವಿದ್ಯಾರ್ಥಿಗಳ ಫಲಿತಾಂಶ ಪ್ರಕಟಿಸುವುದಕ್ಕೆ ಬೇಕಾದ ಕ್ರಮಗಳನ್ನು ನಂತರ ಕೈಗೊಳ್ಳಲಿದೆ.

ಕೇಂದ್ರ ಸರ್ಕಾರ (3ನೇ ಪುಟಕ್ಕೆ)

## ಜಿಲ್ಲೆಯಲ್ಲಿ 535 ಜನರಿಗೆ ಪಾಸಿಟಿವ್, 5 ಸಾವು

ದಾವಣಗೆರೆ, ಜೂ.2- ಜಿಲ್ಲೆಯಲ್ಲಿ 535 ಜನರಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡಿದ್ದು, 203 ಜನರು ಗುಣಮುಖರಾಗಿದ್ದಾರೆ. ಐವರು ಸಾವನ್ನಪ್ಪಿದ್ದಾರೆ ಎಂದು ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 266, ಹರಿಹರ 72, ಜಗಳೂರು 44, ಚನ್ನಗಿರಿ 83, ಹೊನ್ನಾಳಿ 58 ಹಾಗೂ ಹೊರ ಜಿಲ್ಲೆಯ 12 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ.

ಜಗಳೂರು ತಾಲ್ಲೂಕು ಹೊಸಕೆರೆ ಗ್ರಾಮದ 55 ವರ್ಷದ ಮಹಿಳೆ, ಹರಿಹರ ತಾಲ್ಲೂಕು ಕೊಕ್ಕನೂರು ಗ್ರಾಮದ 26 ವರ್ಷದ ಪುರುಷ, ಮಲ್ಲನಾಯಕನಹಳ್ಳಿಯ 60 ವರ್ಷದ ಮಹಿಳೆ, ದಾವಣಗೆರೆ ಭಾರತ್ ಕಾಲೋನಿಯ 31 ವರ್ಷದ ಪುರುಷ ಹಾಗೂ ಬಟ್ಟಲಕಟ್ಟೆಯ 55 ವರ್ಷದ ಪುರುಷ ಕೋವಿಡ್ ಸೋಂಕಿನಿಂದಾಗಿ ಮೃತಪಟ್ಟಿದ್ದಾರೆ.

## ಜಿಲ್ಲೆಯ 31 ಜನರಲ್ಲಿ ಬ್ಲಾಕ್ ಫಂಗಸ್

ದಾವಣಗೆರೆ, ಜೂ.2- ಜಿಲ್ಲೆಯ 31 ಜನರು ಬ್ಲಾಕ್ ಫಂಗಸ್ ಕಾಯಿಲೆಗೆ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ. ಜಿಲ್ಲಾ ಜಿಗಟೇರಿ ಆಸ್ಪತ್ರೆಯಲ್ಲಿ 18 ಜನರು, ಎಸ್.ಎಸ್.ಐ.ಎಂ.ಎಸ್. ಆಸ್ಪತ್ರೆಯಲ್ಲಿ 11, ಬಾಪೂಜಿ ಆಸ್ಪತ್ರೆಯಲ್ಲಿ ಇಬ್ಬರು ಚಿಕಿತ್ಸೆ ಪಡೆಯುತ್ತಿದ್ದಾರೆ.

## ಇಂದು ಕೇರಳಕ್ಕೆ ಮುಂಗಾರು

ನವದೆಹಲಿ, ಜೂ. 2 - ಗುರುವಾರ ಕೇರಳಕ್ಕೆ ಮುಂಗಾರು ತಲುಪಲು ವಾತಾವರಣ ಸೂಕ್ತವಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಸಾಮಾನ್ಯವಾಗಿ ಮುಂಗಾರು ಜೂನ್ 1ರಂದು ಕೇರಳಕ್ಕೆ ತಲುಪುತ್ತದೆ. ಕೇರಳದಲ್ಲಿ ವ್ಯಾಪಕ ಮಳೆಯಾಗಲಿದೆ. ದಕ್ಷಿಣ ಅರಬ್ಬೀ ಸಮುದ್ರದಲ್ಲಿ ಮೋಡಗಳು ದಟ್ಟವಾಗಿವೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

# ರೋಗಿಗಳು ಕೋವಿಡ್ ಕೇರ್ ಸೆಂಟರ್‌ಗೆ ಬಂದರೆ ಆರೋಗ್ಯ ಸುಧಾರಣೆ: ಬೊಮ್ಮಾಯಿ

ಸಿರಿಗೆರೆ, ಜೂ.2- ಕೋವಿಡ್ ಎರಡನೇ ಅಲೆ ರೈತ, ವೈದ್ಯರು, ಸಾಹಿತಿ, ಶಿಕ್ಷಕರು, ಮಕ್ಕಳು ಹೀಗೆ ಎಲ್ಲಾ ವರ್ಗದ ಜನರ ಬದುಕನ್ನು ಕಸಿದುಕೊಂಡಿದೆ. ಕೋವಿಡ್-19 ಕೇರ್ ಸೆಂಟರ್‌ಗೆ ಭೇಟಿ ನೀಡುವುದರಿಂದ ನಿಮ್ಮ ಆರೋಗ್ಯವೂ ಸಹ ಸುಧಾರಿಸುತ್ತದೆ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಕರೆ ನೀಡಿದರು.

ಇಲ್ಲಿನ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಬಾಲಕರ ನಿಲಯದಲ್ಲಿ 'ತರಳಬಾಳು ಕೋವಿಡ್ ಕೇರ್ ಸೆಂಟರ್' ಉದ್ಘಾಟಿಸಿ ಅವರು ಮಾತನಾಡಿದರು.

ಆರೈಕೆ ಕೇಂದ್ರಕ್ಕೆ ಸೇರ್ಪಡೆಗೊಳ್ಳುವುದರಿಂದ ನಿಮ್ಮ ಆರೋಗ್ಯ ಸುಧಾರಿಸುತ್ತೆ. ಅಲ್ಲಿ ವೈದ್ಯರು, ಶುಶ್ರೂಷಕರು ಆತ್ಮಸ್ಥೈರ್ಯ ತುಂಬುವುದರ ಜತೆಯಲ್ಲಿ ಆರೋಗ್ಯದ ಕಾಳಜಿಗೆ ಸ್ಪಂದಿಸುತ್ತಾರೆ. ತರಳಬಾಳು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯವರು ಸಮಾಜಮುಖಿ ಕೆಲಸದ ವೇಳೆಯಲ್ಲಿ ಬಿಡುವು ಮಾಡಿಕೊಂಡು ಕೋವಿಡ್-19 ಸೋಂಕಿತರ ಆರೈಕೆಗಾಗಿ ಫೋನ್‌ಗೆ ಕರೆ ಮಾಡಿ ಆರೋಗ್ಯ ವಿಚಾರಿಸಿ, ಧೈರ್ಯ ತುಂಬುತ್ತಿರುವುದು ಸಂತೋಷ ತಂದಿದೆ ಎಂದರು.

ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಅನಿರೀಕ್ಷಿತ



**ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಬಾಲಕರ ನಿಲಯದಲ್ಲಿ 'ತರಳಬಾಳು ಕೋವಿಡ್ ಕೇರ್ ಸೆಂಟರ್' ಉದ್ಘಾಟನೆ**

**3ನೇ ಮಹಾಯುದ್ಧದೋಪಾದಿಯಲ್ಲಿ ಅಪ್ಪಳಿಸಿದ ಕೊರೊನಾ - ತರಳಬಾಳು ಜಗದ್ಗುರುಗಳ ಆತಂಕ**

ಭೇಟಿ ನೀಡಿದ ಗೃಹ ಸಚಿವರು ಹಾಗೂ ಕೃಷಿ ಸಚಿವರು ತರಳಬಾಳು ಕೋವಿಡ್-19 ಸೆಂಟರ್‌ನ ಉದ್ಘಾಟನೆ ಮಾಡುವುದರೊಂದಿಗೆ ಸೋಂಕಿತರಿಗೆ ಧೈರ್ಯ, ಆತ್ಮವಿಶ್ವಾಸ ಬಂದಿದೆ (2ನೇ ಪುಟಕ್ಕೆ)

# ನಿಯಂತ್ರಣದತ್ತ ಕೊರೊನಾ

## ವಾರದ ಪ್ರಕರಣಗಳು 23 ಸಾವಿರಕ್ಕೆ ಇಳಿಕೆ

ಬೆಂಗಳೂರು, ಜೂ. 2 - ಕೊರೊನಾ ಸೋಂಕು ಬೆಂಗಳೂರು ನಗರದಲ್ಲಿ ತಹಬಂದಿಗೆ ಬರುವ ಮೂಲಕ ಜನರ ನಿಟ್ಟುಸಿರು ಬಿಟ್ಟಿದ್ದಾರೆ.

ಏಪ್ರಿಲ್ ಅಂತ್ಯ ಹಾಗೂ ಮೇ ಮೊದಲ ವಾರದಲ್ಲಿ ವಾರಕ್ಕೆ ಒಂದೂವರೆ ಲಕ್ಷದಷ್ಟು ಪ್ರಕರಣಗಳು ಕಂಡು ಬರುತ್ತಿದ್ದವು. ಈಗ ವಾರಕ್ಕೆ 23 ಸಾವಿರದಷ್ಟು ಪ್ರಕರಣಗಳು ಕಂಡು ಬರುತ್ತಿವೆ.

ನಗರ ವಲಯದ ಗ್ರಾಮೀಣ ಪ್ರದೇಶ ಹೊರತುಪಡಿಸಿದರೆ, ನಗರದಲ್ಲಿ ಕೇವಲ ಪ್ರತಿ ನಿತ್ಯ 700 ಕೇಸುಗಳು ಮಾತ್ರ ದಾಖಲಾಗುತ್ತಿವೆ.

ಸೋಂಕು ಅತೀರೇಕಕ್ಕೆ ಹೋದ ಸಂದರ್ಭದಲ್ಲಿ 23 ರಿಂದ 26 ಸಾವಿರದವರೆಗೂ ಒಂಭತ್ತು ದಿನಗಳ ಕಾಲ ಸತತವಾಗಿ ದಾಖಲಾಗುತ್ತಿತ್ತು. ಆದರೆ ನಗರದಲ್ಲಿ ಸೋಂಕಿನ ಪ್ರಮಾಣ ಕಡಿಮೆಯಾದರೂ, ಸಾವಿನ ಪ್ರಮಾಣ ಶೇ.5 ರಷ್ಟಕ್ಕೇರಿದೆ.

ಇಡೀ ವಿಶ್ವದಲ್ಲಿ ಸಾವಿನ ಪ್ರಮಾಣ 2 ರಿಂದ 3 ರಷ್ಟಿರುತ್ತದೆ. ರಾಷ್ಟ್ರದಲ್ಲೂ 1 ರಿಂದ 3 ರಷ್ಟಿತ್ತು. ಆದರೆ ಸೋಂಕಿತರು (2ನೇ ಪುಟಕ್ಕೆ)

# ಜಿಲ್ಲೆಯಲ್ಲಿ ಸೋಂಕಿತ 142 ಮಂದಿ ಗರ್ಭಿಣಿಯರಿಗೆ ಸುರಕ್ಷಿತ ಹೆರಿಗೆ

ದಾವಣಗೆರೆ,ಜೂ. 2- ಕೋವಿಡ್ ಸೋಂಕಿನ ಭೀತಿ ಗಟ್ಟಿಮುಟ್ಟಾಗಿರುವವರನ್ನೇ ಹೈರಾಣಾಗಿಸುವಂತಹ ಪರಿಸ್ಥಿತಿ ಇರುವ ಈ ಸಂದರ್ಭದಲ್ಲಿ, ಜಿಲ್ಲೆಯಲ್ಲಿ ಕೋವಿಡ್ ಸೋಂಕಿತ ಗರ್ಭಿಣಿಯರು, ಬಾಣಂತಿಯರು ಮತ್ತು ಹಸುಗೂಸುಗಳು ಗುಣಮುಖರಾಗುವ ಮೂಲಕ ಕೊರೊನಾವನ್ನು ಗೆದ್ದಿದ್ದಾರೆ.

ದಾವಣಗೆರೆಯ ಚಿಗಟೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಕೋವಿಡ್ ಸೋಂಕಿತ ಗರ್ಭಿಣಿಯರ ಚಿಕಿತ್ಸೆಗಾಗಿಯೇ ಪ್ರತ್ಯೇಕ ಐಸೋಲೇಷನ್ ವಾರ್ಡ್ ಪ್ರಾರಂಭಿಸಲಾಗಿದೆ. ಇಲ್ಲಿಯೂ ಕೂಡ ಬೆಡ್ ನಡುವೆ ಸಾಮಾಜಿಕ ಅಂತರ ಕಾಯ್ದುಕೊಂಡು, ವಿಶೇಷವಾಗಿ ಕೋವಿಡ್ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸೋಂಕಿತ ಗರ್ಭಿಣಿಯರಲ್ಲಿ ಮಾನಸಿಕ ಸ್ಥೈರ್ಯ ತುಂಬುವ ಜೊತೆಗೆ ಸುರಕ್ಷಿತ ಹೆರಿಗೆಯನ್ನೂ ಮಾಡಿದ್ದಾರೆ.

**ಸೋಂಕು ಗೆದ್ದ 142 ಬಾಣಂತಿಯರು :** ಕೋವಿಡ್‌ನ ಎರಡನೆ ಅಲೆ ಪ್ರಾರಂಭವಾದ ಏಪ್ರಿಲ್ ನಿಂದ ಈವರೆಗೆ ಜಿಲ್ಲೆಯಲ್ಲಿ ಕೋವಿಡ್ ಸೋಂಕಿತ ಒಟ್ಟು 124 ಗರ್ಭಿಣಿಯರಿಗೆ ದಾವಣಗೆರೆಯ ಚಿಗಟೇರಿ ಜಿಲ್ಲಾ



ಆಸ್ಪತ್ರೆಯಲ್ಲಿ ಸುರಕ್ಷಿತವಾಗಿ ಹೆರಿಗೆ ಮಾಡಿಸಲಾಗಿದೆ. ಈ ಪೈಕಿ 70 ಸೋಂಕಿತ ಗರ್ಭಿಣಿಯರಿಗೆ ನಾರ್ಮಲ್ ಹೆರಿಗೆಯಾಗಿದ್ದರೆ, 54 ಸಿಸೇರಿಯನ್ ಹೆರಿಗೆಗಳಾಗಿವೆ.

18 ಹಸುಗೂಸುಗಳಿಗೆ ಸೋಂಕು ತಗುಲಿದ್ದು, ಈ ಪೈಕಿ 16 ಶಿಶುಗಳು ಕೊರೊನಾ ಸೋಂಕಿನಿಂದ ಗುಣಮುಖವಾಗಿವೆ. ತೀವ್ರ ಕ್ಲಿಷ್ಟಕರ ಪರಿಸ್ಥಿತಿಯ ಕಾರಣದಿಂದ ಕೇವಲ 2 ಶಿಶುಗಳು ಮಾತ್ರ ಸೋಂಕು

**ಎರಡನೆ ಅಲೆಯ ನಡುವೆ ಕೋವಿಡ್ ಸೋಂಕು ಗೆದ್ದ ಬಾಣಂತಿಯರು ಹಾಗೂ ಹಸುಗೂಸುಗಳು**

ಗೆಲ್ಲಲಾರದೆ ಸಾವಿಗೆ ಶರಣಾಗಿವೆ.

'ಜಿಲ್ಲಾ ಆಸ್ಪತ್ರೆಯಲ್ಲಿನ ವೈದ್ಯರು ಹಾಗೂ ಶುಶ್ರೂಷಕರು ಸೋಂಕಿತ ಗರ್ಭಿಣಿಯರು, ಬಾಣಂತಿಯರ ಹಾಗೂ ಹಸುಗೂಸುಗಳ ಆರೋಗ್ಯ ಸುರಕ್ಷತೆಗಾಗಿ ಕೈಗೊಂಡ ವಿಶೇಷ ಕಾಳಜಿಯಿಂದಾಗಿ, ಇವರು ಸೋಂಕಿನಿಂದ ಗುಣಮುಖರಾಗಲು ಸಾಧ್ಯವಾಯಿತು. ಗರ್ಭಿಣಿಯರು, ಬಾಣಂತಿಯರು ಕೊರೊನಾ ವಿಷಯದಲ್ಲಿ ಎಚ್ಚರಿಕೆ ವಹಿಸುವುದು ಒಳ್ಳೆಯದು, ಯಾವುದೇ ಆರೋಗ್ಯ ಸಮಸ್ಯೆ ಕಂಡುಬಂದರೂ, ತಕ್ಷಣ ವೈದ್ಯರ ಗಮನಕ್ಕೆ ತಂದು ಚಿಕಿತ್ಸೆ ಪಡೆದರೆ ಯಾವುದೇ ಸಮಸ್ಯೆಯಾಗುವುದಿಲ್ಲ' ಎನ್ನುತ್ತಾರೆ ಜಿಲ್ಲಾಸ್ಪತ್ರೆಯ ತಜ್ಞ ವೈದ್ಯ ಡಾ. ಗಿರಿಧರ್.ಜಿ

ಜಿಲ್ಲೆಯಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿಯೂ ಒಟು 18 ಸೋಂಕಿತ ಗರ್ಭಿಣಿಯರಿಗೆ ಸುರಕ್ಷಿತ ಹೆರಿಗೆಯಾಗಿದ್ದು, ಈ ಪೈಕಿ 7 ಸಹಜ ಹೆರಿಗೆ ಹಾಗೂ 11 ಸಿಸೇರಿಯನ್ ಹೆರಿಗೆ ಮಾಡಿಸಲಾಗಿದೆ.

**ಎದೆ ಹಾಲಿನಿಂದ ಸೋಂಕು ಹರಡಲ್ಲ :** ಕೊರೊನಾ ಇದ್ದರೂ ಕೂಡ ಮಾಸ್ಕ್ ಧರಿಸಿ, ತಾಯಂದಿರು ಹಸುಗೂಸುಗಳಿಗೆ ಹಾಲುಣಿಸಬಹುದು. ತಾಯಿಯ ಎದೆ ಹಾಲಿನಿಂದ ಕೊರೊನಾ ಸೋಂಕು ಮಗುವಿಗೆ ಹರಡುವುದಿಲ್ಲ. ಆದರೆ ಹಾಲುಣಿಸುವಾಗ ತಾಯಂದಿರು ಅತ್ಯಂತ ಎಚ್ಚರಿಕೆ ವಹಿಸಬೇಕು. ಮಾಸ್ಕ್ ಧರಿಸದೆ ಕೆಮ್ಮುವುದು, ಸೀನುವುದು ಮಾಡುವುದರಿಂದ ಮಗುವಿಗೆ ಸೋಂಕು ತಗಲುವ ಸಾಧ್ಯತೆಗಳಿರುತ್ತವೆ.

ಮಗುವನ್ನು ಸುರಕ್ಷಿತ ಅಂತರದಲ್ಲಿ ಪ್ರತ್ಯೇಕವಾಗಿ ಮಲಗಿಸಬೇಕು, ಹಾಲುಣಿಸುವ ಮೊದಲು ಹಾಗೂ ನಂತರ, ಪ್ರತಿ ಬಾರಿಯೂ ತಾಯಿ ಕೈಯನ್ನು ಸಾಬೂನಿನಿಂದ ಸ್ವಚ್ಛವಾಗಿ ತೊಳೆದುಕೊಳ್ಳಬೇಕು. (2ನೇ ಪುಟಕ್ಕೆ)


॥ ಶ್ರೀ ವಿತರಾಗಾಯ ನಮಃ ॥ ॥ ಶ್ರೀ ಪದ್ಮಾವತಿದೇವಿ ಪ್ರಸನ್ನ ॥

**ನಾಲ್ಕನೇ ವರ್ಷದ ಚಿರಸ್ಮರಣೆ**



ದಿ. ಶ್ರೀಮತಿ ಬೇತೂರು ವಿನೋದಮ್ಮ
ಜನನ: 19-05-1944
ನಿಧನ: 03-06-2017

ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷಗಳು ಕಳೆದವು. ಸದಾ ನಿಮ್ಮ ಸ್ಮರಣೆಯಲ್ಲಿರುವ:

ಪುತ್ರಿ: ಶ್ರೀಮತಿ ಬಿ.ಕೆ. ಅರ್ಚನಾ,
ಅಳಿಯ : ಶ್ರೀ ಡಿ. ಮಹಾವೀರ್,
ಪ್ರೀತಿಯ ಮೊಮ್ಮಗಳು : ಕು॥ ಎಂ. ಲಕ್ಷ್ಮಿ,
ಪದ್ಮಾಂಬ ಕಾಂಪ್ಲೆಕ್ಸ್,(ಬೇತೂರು ಕುಬೇರಪ್ಪ) ದಾವಣಗೆರೆ.
ಬೇತೂರು ಕುಟುಂಬ ವರ್ಗದವರು
ಶ್ರೀ ಮಹಾವೀರ ಆಟೋಮೊಬೈಲ್ಸ್, ರಾಣೇಬೆನ್ನೂರು.

# ಕೊರೊನಾ ಮತ್ತು ಬ್ಲ್ಯಾಕ್ ಫಂಗಸ್ ಭೀತಿ



ಈ ಕೋವಿಡ್ ಕಾಯಿಲೆಯ ಎರಡನೇ ಅಲೆ ಭಾರತದಲ್ಲಿ ತನ್ನ ಅತಿಯಾದ ಪ್ರಭಾವ ತೋರಿಸುತ್ತಿರುವಂತೆಯೇ ಬ್ಲ್ಯಾಕ್ ಫಂಗಸ್ ಸೋಂಕು ಹೆಚ್ಚಾಗುತ್ತಿದೆ. ಭಾರತದ ಬೇರೆ ಬೇರೆ ಭಾಗದ ಕಣ್ಣಿನ ವೈದ್ಯರುಗಳು ಈ ರೀತಿಯ 800ಕ್ಕೂ ಹೆಚ್ಚಿನ ಬ್ಲ್ಯಾಕ್ ಫಂಗಸ್ ಸೋಂಕನ್ನು ವರದಿ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಐದು ನೂರಕ್ಕೂ ಹೆಚ್ಚು ಜನ ಈ ಬ್ಲ್ಯಾಕ್ ಫಂಗಸ್ ಸಮಸ್ಯೆಯಿಂದ ತೊಂದರೆ ಅನುಭವಿಸುತ್ತಿದ್ದಾರೆ ಮತ್ತು ಕೆಲವರು ಇದರಿಂದ ಶಾಶ್ವತವಾಗಿ ದೃಷ್ಟಿಹೀನರಾಗಿದ್ದಾರೆ ಹಾಗೂ ಜೀವವನ್ನು ಕಳೆದುಕೊಂಡಿದ್ದಾರೆ.

**ಏನೀ ಬ್ಲ್ಯಾಕ್ ಫಂಗಸ್ ಅಥವಾ ಮ್ಯುಕರ್ ಮೈಕೋಸಿಸ್?**

ಇದು ತುಂಬಾ ಅಪರೂಪದ ಫಂಗಸ್ ಅಥವಾ ಶಿಲೀಂಧ್ರದ ಸೋಂಕು. ಮಣ್ಣು, ಗಿಡಗಂಟಿಗಳು, ಕೊಳೆಯುತ್ತಿರುವ ಹಣ್ಣು, ತರಕಾರಿಗಳು ಇವುಗಳಲ್ಲಿ ಕಂಡು ಬರುವ ಮ್ಯುಕರ್ ಮೋಲ್ಡ್‌ಗಳಲ್ಲಿ ಈ ಫಂಗಸ್ ಕಂಡು ಬರುತ್ತದೆ. ಕೆಲವೊಮ್ಮೆ ಆರೋಗ್ಯವಂತ ವ್ಯಕ್ತಿಗಳ ಮೂಗಿನ ಮ್ಯೂಕಸ್ ಮೆಂಬ್ರೇನ್‌ಗಳಲ್ಲಿ ಸಹಿತ ಇದು ಕಂಡು ಬರುತ್ತದೆ. ಇದು ಮುಖ್ಯವಾಗಿ ಮೂಗಿನ ಭಾಗದ ಸೈನಸ್‌ಗಳು, ಶ್ವಾಸಕೋಶ ಮತ್ತು ಕಣ್ಣು ಈ ಭಾಗಗಳಲ್ಲಿ ಹೆಚ್ಚಾಗಿ ಸೋಂಕನ್ನು ಉಂಟು ಮಾಡುತ್ತದೆ. ಇದು ಡಯಾಬಿಟಿಸ್, ಕ್ಯಾನ್ಸರ್ ಮತ್ತು ರೋಗ ನಿರೋಧಕ ಶಕ್ತಿ ಕಡಿಮೆ ಇರುವವರಲ್ಲಿ ತೀವ್ರವಾಗಿ ಉಲ್ಬಣಗೊಂಡು ವ್ಯಕ್ತಿಯ ಜೀವಕ್ಕೆ ಮಾರಕವಾಗುತ್ತದೆ.

ಈಗ ಕೋವಿಡ್ ಅಥವಾ ಕೊರೊನಾ ಕಾಯಿಲೆಯ ಜೊತೆ ಯಾರ ದೇಹದಲ್ಲಿ ಸೋಂಕು ನಿರೋಧಕ ಶಕ್ತಿ ಕುಂಠಿತಗೊಂಡಿದೆಯೋ ಅಂತಹವರಲ್ಲಿ ಕಾಣಿಸಿಕೊಂಡು ಜೀವಕ್ಕೆ ಮಾರಕವಾಗ ಬಹುದು. ಹಾಗೆಯೇ ಯಾರಲ್ಲಿ ಕೋವಿಡ್ ಕಾಯಿಲೆಯ ಚಿಕಿತ್ಸೆಯಲ್ಲಿ ಸ್ಟಿರಾಯ್ಡ್ ಔಷಧವನ್ನು ಸುದೀರ್ಘ ಅವಧಿಯವರೆಗೆ ಉಪಯೋಗಿಸಲಾಗುತ್ತದೆಯೋ ಅಂತಹವರಲ್ಲಿ ಅವರ ದೇಹದ ರೋಗ ನಿರೋಧಕ ಶಕ್ತಿಯನ್ನು ಕುಂಠಿತಗೊಳಿಸಿ, ಅವರ ಜೀವಕ್ಕೆ ಮಾರಕವಾಗಬಲ್ಲದು. ಹಾಗಾಗಿ ಕೋವಿಡ್ ಕಾಯಿಲೆಯಲ್ಲಿ ಸ್ಟಿರಾಯ್ಡ್ ಔಷಧವನ್ನು ಉಪಯೋಗಿಸುವಾಗ ತುಂಬಾ ಎಚ್ಚರಿಕೆಯಿಂದ ನಿರ್ಧಾರ ತೆಗೆದುಕೊಳ್ಳಬೇಕು. ಅದರಲ್ಲೂ ರೋಗಿಯು ಡಯಾಬಿಟಿಸ್ ಅಥವಾ ಮಧುಮೇಹದಿಂದ ಬಳಲುತ್ತಿದ್ದರೆ ಈ ಸ್ಟಿರಾಯ್ಡ್ ಔಷಧ ಮಾರಕವಾಗಬಹುದು.

ಕೋವಿಡ್ ಕಾಯಿಲೆಯಲ್ಲಿ ಸ್ಟಿರಾಯ್ಡ್ ಔಷಧವು ಶ್ವಾಸಕೋಶದಲ್ಲಿನ ಉರಿಯೂತವನ್ನು ಕಡಿಮೆ ಮಾಡುತ್ತದೆ. ಈ ರೀತಿಯಲ್ಲಿ ಕೊರೊನಾ ವೈರಸ್‌ನಿಂದ ದೇಹಕ್ಕೆ ಉಂಟಾದ ಹಾನಿಯನ್ನು ಕಡಿಮೆ ಮಾಡಲು ಯತ್ನಿಸುತ್ತದೆ. ಹೀಗೆ ಈ ಔಷಧವು ದೇಹದ ಪ್ರತಿರೋಧ ಶಕ್ತಿಯನ್ನು ಕುಂದಿಸುತ್ತದೆ. ಹಾಗಲ್ಲದೇ ಡಯಾಬಿಟಿಸ್ ಇರುವ ಮತ್ತು ಡಯಾಬಿಟಿಸ್ ಇಲ್ಲದ ಎರಡೂ ತರಹದ ರೋಗಿಗಳಲ್ಲಿ ರಕ್ತದಲ್ಲಿನ ಸಕ್ಕರೆಯ ಅಂಶವನ್ನು ತೀವ್ರವಾಗಿ ಜಾಸ್ತಿ ಮಾಡುತ್ತದೆ. ಈ ರೀತಿ ದೇಹದ ಪ್ರತಿರೋಧ ಶಕ್ತಿಯು ಕುಂದುವುದರಿಂದ ಈ ತರಹದ ವ್ಯಕ್ತಿಗಳು ಬ್ಲ್ಯಾಕ್ ಫಂಗಸ್ ಸೋಂಕಿಗೆ ಒಳಗಾಗುವ ಸಾಧ್ಯತೆ ಹೆಚ್ಚಿರುತ್ತದೆ.

ಇತ್ತೀಚಿನ ವರದಿಗಳ ಪ್ರಕಾರ ದೇಶದ ಬೇರೆ ಬೇರೆ ರಾಜ್ಯಗಳಿಂದ ಕಣ್ಣಿನ ತಜ್ಞರು ಈ ಬ್ಲಾಕ್ ಫಂಗಸ್ ಸೋಂಕಿನ ಬಗ್ಗೆ ವರದಿ ಮಾಡಿ ದ್ದಾರೆ. ಅದರಲ್ಲಿ ಹಲವರಿಗೆ ಡಯಾಬಿಟಿಸ್ ಕಾಯಿಲೆಯಿದ್ದು ಮತ್ತು ಅದು ನಿಯಂತ್ರಣದಲ್ಲಿ ಇಲ್ಲದೇ ಇರುವುದು ಕುಂಡುಬಂದಿದೆ. ಕೆಲವರಲ್ಲಿ ಈ ಸೋಂಕು ಹತೋಟಿಗೆ ಬರದೆ ಕಣ್ಣಿನ ಶಸ್ತ್ರ ಚಿಕಿತ್ಸೆ ಮಾಡಿ ಇಡೀ ಕಣ್ಣು ಗುಡ್ಡೆಯನ್ನು ಹೊರತೆಗೆಯಬೇಕಾಗುವ ಪರಿಸ್ಥಿತಿ ಬಂದಿದೆ. ಈ ರೀತಿ ಶಸ್ತ್ರ ಚಿಕಿತ್ಸೆ ಮಾಡುವಲ್ಲಿ ವಿಳಂಬವಾದರೆ ಅದು ಜೀವಕ್ಕೆ ಮಾರಕವಾಗುತ್ತದೆ. ಕೋವಿಡ್ ಕಾಯಿಲೆ ಬಂದು 12-15 ದಿನಗಳ ನಂತರ ಕೆಲವರಲ್ಲಿ ಈ ಬ್ಲ್ಯಾಕ್ ಫಂಗಸ್ ಸೋಂಕು ಕಾಣಿಸಿಕೊಂಡಿದೆ. ಮುಂಬಯಿನ ಒಂದು ಪ್ರಮುಖ ಆಸ್ಪತ್ರೆಯಲ್ಲಿ ಕಳೆದ 3 ತಿಂಗಳಲ್ಲಿ, 24 ವ್ಯಕ್ತಿಗಳಲ್ಲಿ ಈ ಸೋಂಕು ಕಂಡು ಬಂದಿದೆ. ಕೋವಿಡ್ ಮುಂಚಿನ/ಹಿಂದಿನ ವರ್ಷದಲ್ಲಿ ಕೇವಲ 3 ವ್ಯಕ್ತಿಗಳಲ್ಲಿ ಕಾಣಿಸಿಕೊಂಡಿತ್ತು. 24 ಜನರಲ್ಲಿ 11 ಜನರ ಕಣ್ಣು ತೆಗೆಯಬೇಕಾಗಿಯಿತು. 6 ರೋಗಿಗಳು ಮರಣ ಹೊಂದಿದರು. ಇದರಲ್ಲಿ ಹೆಚ್ಚಿನ ರೋಗಿಗಳು ಮಧ್ಯವಯಸ್ಸಿನವರು ಮತ್ತು ಅವರೆಲ್ಲಾ ಕೋವಿಡ್ ಕಾಯಿಲೆಯಿಂದ ಗುಣಹೊಂದಿ 2 ವಾರಗಳ ನಂತರ ಈ ಬ್ಲ್ಯಾಕ್ ಫಂಗಸ್ ಸೋಂಕಿಗೆ **(3ನೇ ಪುಟಕ್ಕೆ)**

**- ಡಾ. ಸುನೀಲ್,**
ಎಂಎಸ್., ಎಫ್‌ಆರ್‌ಸಿಎಸ್,
ನೇತ್ರಾಲಯ,
ದಾವಣಗೆರೆ.
98807 50565



# ಕೇರ್ ಸೆಂಟರ್‌ಗೆ ಬಂದರೆ ಆರೋಗ್ಯ ಸುಧಾರಣೆ

**(1ನೇ ಪುಟದಿಂದ)** ಎಂದರೆ ತಪ್ಪಾಗಲಾರದು ಎಂದರು.

ಇಬ್ಬರೂ ಸಚಿವರಲ್ಲಿ ಗೃಹ ಸಚಿವರು ಎಲ್ಲರನ್ನೂ ಒಂದು ರೀತಿ ಬಂಧನದಲ್ಲಿಟ್ಟಿದ್ದಾರೆ. ಆದರೆ ಕೃಷಿ ಸಚಿವರು ಕೋವಿಡ್ ಸಮಯದಲ್ಲಿ ಧಾರಾಳವಾಗಿ ಎಲ್ಲಾ ಕೆಲಸ ಮಾಡಿಕೊಳ್ಳಲು ಮುಕ್ತ ಅವಕಾಶ ಮಾಡಲು ಕೊಟ್ಟಿದ್ದಾರೆ ಎಂದು ಭಾವಿಸುತ್ತೇವೆ. ಕೊರೊನಾ ನಗರ, ಗ್ರಾಮೀಣ ಎಲ್ಲಾ ಸಾರ್ವಜನಿಕರ ಬದುಕನ್ನು ಕಸಿದುಕೊಳ್ಳುವುದರ ಜೊತೆಗೆ ಮಕ್ಕಳನ್ನು ತಬ್ಬಲಿಗಳನ್ನಾಗಿ ಮಾಡಿದೆ. ಇದು ಒಂದು ರೀತಿ 3ನೆಯ ಮಹಾಯುದ್ದದೋಪಾದಿಯಲ್ಲಿ ಬಂದು ಅಪ್ಪಳಿಸಿದೆ ಎಂದು ಅಭಿಪ್ರಾಯಿಸಿದರು.

ಎಲ್ಲಾ ರಾಷ್ಟ್ರಗಳಿಗೆ ಕೊರೊನಾ ಒಂದೇ ವೈರಿಯಾಗಿದೆ. ನಮ್ಮ ಶಿವ ಸೈನ್ಯದ ಶಿಷ್ಯರು ಮೊಟ್ಟ ಮೊದಲು ತರಳಬಾಳು ಸೇವಾ ಸಮಿತಿ ರಚಿಸಿ ಕೋವಿಡ್ ಸೋಂಕಿತರಿಗೆ ಊಟದ ವ್ಯವಸ್ಥೆಯನ್ನು ಕಡಿಮೆ ದಿವಸಗಳಿಗೆ ಮಾಡಿಕೊಂಡಿದ್ದರು. ಅದನ್ನು ಸದಾಕಾಲ ಅವರನ್ನು ಆರೈಕೆ ಮಾಡುವ ತನಕ ಹಸಿವನ್ನು ನೀಗಿಸಲಿ ಎಂದರು.

ಸಂಸದ ಜಿ.ಎಂ.ಸಿದ್ದೇಶ್ವರ್ ಮಾತನಾಡುತ್ತಾ, ತರಳಬಾಳು ಶ್ರೀಗಳು ಕೊರೊನಾ ರೋಗಿಗಳ ಆರೋಗ್ಯದ ಕಡೆ ಗಮನವಿರಿಸಿ ಕೋವಿಡ್ ಸೋಂಕಿತರು, ವೈದ್ಯರು, ಪೋಲಿಸರು, ಆಶಾ ಕಾರ್ಯತೆರ್ಯರಿಗೆ ಪ್ರತಿನಿತ್ಯ ದಾಸೋದ ವ್ಯವಸ್ಥೆ ಮಾಡಿದ್ದಾರೆ. ವಿಶೇಷವಾಗಿ ಸೋಂಕಿತರ ಆರೋಗ್ಯದ ಕಡೆ ಗಮನವಿರುಸುವುದರ ಜೊತೆಯಲ್ಲಿ ಸದಾ ಅವರ ಆರೋಗ್ಯದ ಬಗ್ಗೆ ವಿಚಾರಿಸಿ, ಧೈರ್ಯ ತುಂಬುವ ಕೆಲಸ ಮಾಡುತ್ತಿದ್ದಾರೆ. ಹರಿಹರ, ದಾವಣಗೆರೆ, ಸಿರಿಗೆರೆ, ಬೆಂಗಳೂರು ಕಡೆಗಳಲ್ಲಿ ಸುಮಾರು ದಿನನಿತ್ಯ 500ರಿಂದ 800 ಸೋಂಕಿತರಿಗೆ ಹಾಗೂ ಸೇವಾ ಕಾರ್ಯಕರ್ತರಿಗೆ ಪ್ರಸಾದ ವ್ಯವಸ್ಥೆಯನ್ನು ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ಸಮಿತಿಯ ಸದಸ್ಯರುಗಳು ಕೆಲಸ ನಿರ್ವಹಿಸುತ್ತಿದ್ದಾರೆ ಎಂದರು.

ಇದೇ ಸಂದರ್ಭದಲ್ಲಿ ಆಸ್ಪತ್ರೆಯಲ್ಲಿ ಮೈನ್ಸ್ ಸಂಸ್ಥೆಯಿಂದ ಕೊಡುಗೆ ನೀಡಿದ ಪರಿಕರಗಳನ್ನು ನೀಡಿ ಉದ್ಘಾಟಿಸಲಾಯಿತು. ಆಸ್ಪತ್ರೆಯ ಹೊರಭಾಗದ ಕಾಂಪೌಂಡ್‌ಗೆ 50 ಲಕ್ಷದ ಅನುದಾನದಡಿಯಲ್ಲಿ ಗುದ್ದಲಿ ಪೂಜೆ, ಆಂಬ್ಯುಲೆನ್ಸ್ ವಾಹನಕ್ಕೆ ಚಾಲನೆ ನೀಡಿದರು. ಹೊಸದಾಗಿ ತರಳಬಾಳು ಕೋವಿಡ್ ಕೇರ್ ಸೆಂಟರ್ ಉದ್ಘಾಟನೆಗೊಂಡಿತು. ಕೇರ್ ಸೆಂಟರ್‌ನಲ್ಲಿ ಒಟ್ಟು 60ಜನರ ತಪಾಸಣೆಗೆ ಸಿದ್ಧವಾಗಿದೆ.

ಕಾರ್ಯಕ್ರಮದಲ್ಲಿ ಕೃಷಿ ಸಚಿವ ಬಿ.ಸಿ. ಪಾಟೀಲ್, ಶಾಸಕ ಎಂ.ಚಂದ್ರಪ್ಪ, ಸಂಸದ ಎ. ನಾರಾಯಣಸ್ವಾಮಿ, ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ. ರಾಧಿಕಾ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಡಾ.ಕೆ.ನಂದಿನಿ ದೇವಿ, ತಹಶೀಲ್ದಾರ್ ವೆಂಕಟೇಶಯ್ಯ, ಕಂದಾಯ ಅಧಿಕಾರಿಗಳು, ಆರೋಗ್ಯ ವೈದ್ಯಾಧಿಕಾರಿಗಳು, ಗ್ರಾಮಪಂಚಾಯಿತಿ ಅಧ್ಯಕ್ಷರು, ಸದಸ್ಯರುಗಳು, ಆಶಾಕಾರ್ಯಕತೆಯರು ಇದ್ದರು.

**ಇಆರ್‌ಎಂ ಗ್ರೂಪ್ಸ್ ಮಾಲೀಕರಾದ ಆರ್. ಪ್ರವೀಣ್ ಚಂದ್ರ ಇವರ ಕೊಡುಗೆ:** ರೆಫ್ರಿಜರೇಟರ್, ಜನರೇಟರ್, 20 ಹಾಸಿಗೆ, ಇಸಿಜಿ ಉಪಕರಣ, ಆಕ್ಸಿಜನ್ ಕಾನ್ಸಂಟ್ರೇಟರ್, 8ಪಲ್ಸ್‌ಆಕ್ಸೀಮೀಟರ್, ಗೀಸರ್, ಡ್ರಿಂಕಿಂಗ್ ವಾಟರ್ ಹೀಟರ್, ಬೆಡ್‌ಶೀಟ್ 100, ಸರ್ಜಿಕಲ್ ಹ್ಯಾಂಡ್ ಗ್ಲೌಸ್ 2000, ಸ್ಯಾನಿಟೈಸರ್ ಗಳನ್ನು ಗ್ರಾಮದ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕೊಡುಗೆಯಾಗಿ ನೀಡಿದ್ದಾರೆ.

# ಮಾದರಿ ಬಾಡಿಗೆ ಕಾಯ್ದೆಗೆ ಕೇಂದ್ರ ಸರ್ಕಾರದ ಅಸ್ತು

**(1ನೇ ಪುಟದಿಂದ)** ಖಾಲಿ ಇವೆ. ಇವುಗಳನ್ನು ಬಾಡಿಗೆಗೆ ದೊರೆಯುವಂತೆ ಮಾಡುವುದು 2022ರ ಸರ್ವರಿಗೂ ಸೂರು ಯೋಜನೆಯ ಭಾಗವಾಗಿದೆ ಎಂದು ಪುರಿ ಹೇಳಿದ್ದಾರೆ.

ಮನೆ ಬಾಡಿಗೆಗೆ ಕೊಟ್ಟರೆ ವಾಪಸ್ ಪಡೆಯುವುದು ಸಮಸ್ಯೆಯಾಗಬಹುದು. ಆಸ್ತಿ ತಗಾದೆಗೆ ಸಿಲುಕಬಹುದು ಎಂಬ ಕಾರಣಕ್ಕೆ ಸಾಕಷ್ಟು ಜನರು ಮನೆ ಬಾಡಿಗೆಗೆ ನೀಡುತ್ತಿಲ್ಲ. ಇದೇ ಕೋಟಿಗಟ್ಟಲೆ ಮನೆ ಖಾಲಿ ಉಳಿಯಲು ಕಾರಣ ಎಂದು ಅಧಿಕಾರಿಗಳು ಹೇಳಿದ್ದಾರೆ. ಮಾದರಿ ಬಾಡಿಗೆ ಕಾಯ್ದೆಯಿಂದ ಮನೆ ಮಾಲೀಕರಲ್ಲಿ ಭದ್ರತಾ ಭಾವನೆ ಸಿಗಲಿದೆ. ಕಾಯ್ದೆಯಲ್ಲಿ ಮನೆ ಮಾಲೀಕರು ಹಾಗೂ ಬಾಡಿಗೆದಾರರಿಬ್ಬರ ಪಾತ್ರವನ್ನು ನಿರ್ಧರಿಸಲಾಗಿದೆ ಎಂದು ಅಧಿಕಾರಿ ಹೇಳಿದ್ದಾರೆ.

ಮಾದರಿ ಕಾಯ್ದೆಯ ಅನ್ವಯ ಯಾವುದೇ ಮನೆ ಮಾಲೀಕ ಇಲ್ಲವೇ ಆಸ್ತಿ ಹೊಣೆ ಹೊತ್ತವರು ಬಾಡಿಗೆಯಲ್ಲಿರುವವರಿಗೆ ಅಗತ್ಯ ವಸ್ತುಗಳ ಪೂರೈಕೆ ನಿಲ್ಲಿಸುವಂತಿಲ್ಲ.

ಒಪ್ಪಂದ ಜಾರಿಯಲ್ಲಿರುವವರೆಗೆ ಬಾಡಿಗೆ ಮನೆ ಬಲವಂತವಾಗಿ ಖಾಲಿ ಮಾಡಿಸುವಂತಿಲ್ಲ. ಉಭಯರು ಒಪ್ಪಿದ ನಂತರವೇ ಮನೆ ಖಾಲಿ ಮಾಡಬೇಕಾಗುತ್ತದೆ.

ಮನೆ ರಿಪೇರಿ, ಗೋಡೆಗೆ ಬಣ್ಣ, ಕೊಳಾಯಿ ನಿರ್ವಹಣೆ, ವಿದ್ಯುತ್ ವೈರುಗಳ ನಿರ್ವಹಣೆಯಂತಹ ಕೆಲಸಗಳು ಮನೆ ಮಾಲೀಕನ ಜವಾಬ್ದಾರಿಯಾಗಿವೆ.

ಬಾಡಿಗೆಯಲ್ಲಿ ಇರುವವರು ಸ್ವಚ್ಛತೆ, ಸ್ವಿಚ್ ಮತ್ತು ಸಾಕೆಟ್ ರಿಪೇರಿ, ಅಡುಗೆ ಮನೆ ಉಪಕರಣಗಳ ರಿಪೇರಿ, ಕಿಟಕಿ ಗಾಜುಗಳ ನಿರ್ವಹಣೆ, ತೋಟ ಹಾಗೂ ಖಾಲಿ ಜಾಗದ ನಿರ್ವಹಣೆಯ ಹೊಣೆ ಹೊರಬೇಕಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಮಾದರಿ ಬಾಡಿಗೆ ಕಾಯ್ದೆಗೆ ಒಪ್ಪಿಗೆ ನೀಡಲಾಗಿದೆ.

# ಮನುಷ್ಯನಿಗೆ ಆತ್ಮವಿಶ್ವಾಸ ಮುಖ್ಯ



**ಹರಿಹರ ತಾಲ್ಲೂಕು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಡಿ. ಚಂದ್ರ ಮೋಹನ್**

ಹರಿಹರ ಜೂ.2- ವೈರಸ್ ದೃಢಪಟ್ಟವರು ಹೆದರುವ ಅವಶ್ಯಕತೆಯಿಲ್ಲ. ಧೈರ್ಯದಿಂದ ಚಿಕಿತ್ಸೆಯನ್ನು ಪಡೆದರೆ ಅತೀ ಶೀಘ್ರದಲ್ಲೇ ಗುಣ ಮುಖರಾಗುತ್ತೀರಿ ಎಂದು ತಾಲ್ಲೂಕು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಡಿ. ಚಂದ್ರ ಮೋಹನ್ ಹೇಳಿದರು.

ಸರ್ಕಾರ ಸಾಕಷ್ಟು ಜಾಗೃತಿಯನ್ನು ಜನರಲ್ಲಿ ಮೂಡಿಸಿದರೂ, ನಾಗರಿಕರು ಮಾತ್ರ ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ವೈರಸ್ ನಿಯಂತ್ರಿಸಬೇಕಾದರೆ ಇಲಾಖೆಗಳ ಪ್ರಯತ್ನ ಮಾತ್ರ ಸಾಲದು, ಪ್ರತಿಯೊಬ್ಬ ಸಾರ್ವಜನಿಕರು ಸಹಕರಿಸಿ ಕೋವಿಡ್ 19 ಮಾರ್ಗಸೂಚಿಗಳನ್ನು ಪಾಲಿಸಿದರೆ ನಿಯಂತ್ರಣಕ್ಕೆ ತರುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಿದರು.

ವೈರಸ್ ದೃಢಪಟ್ಟು ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆದ ವ್ಯಕ್ತಿಗಳು ಒಟ್ಟು 5,498. ಇದರಲ್ಲಿ ಚಿಕಿತ್ಸೆ ಪಡೆದು ಗುಣಮುಖರಾದವರು 4,909 ವ್ಯಕ್ತಿಗಳು ಆಸ್ಪತ್ರೆಯಿಂದ ಬಿಡುಗಡೆಗೊಂಡಿರುತ್ತಾರೆ. 589 ಸಕ್ರಿಯ ಪ್ರಕರಣಗಳು ಇರುತ್ತದೆ. ಸಾರ್ವಜನಿಕ ಆಸ್ಪತ್ರೆಯಲ್ಲಿ 60, ಖಾಸಗಿ ಆಸ್ಪತ್ರೆಯಲ್ಲಿ 31 ಪ್ರಕರಣಗಳು ಇದ್ದು, ನಗರ, ಗ್ರಾಮೀಣ ಪ್ರದೇಶಗಳಾದ ದೇವರಬೆಳಕೆರೆ, ಎಸ್‌ಜೆವಿಪಿ ಕಾಲೇಜು ಕೊಂಡಜ್ಜಿ, ಗುತ್ತೂರು ಕೋವಿಡ್ ಕೇರ್ ಕೇಂದ್ರಗಳಲ್ಲಿ 309 ಸೋಂಕಿತ ವ್ಯಕ್ತಿಗಳು ಆರೈಕೆಯಲ್ಲಿ ಇದ್ದಾರೆ ಎಂದರು.

ಸಾಮಾಜಿಕ ಅಂತರ, ಮಾಸ್ಕ್ ಧರಿಸುವುದು ಮತ್ತು ಮನೆ ಸುತ್ತಮುತ್ತಲಿನ ಪರಿಸರ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದನ್ನು ಪ್ರತಿಯೊಬ್ಬ ಪ್ರಜೆಯೂ ಚಾಚೂ ತಪ್ಪದೇ ಅನುಸರಿಸಿದರೆ ಇಂತಹ ನೂರಾರು ವೈರಸ್‌ಗಳನ್ನು ಮುಕ್ತ ಮಾಡಬಹುದು ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು. ಆರೋಗ್ಯ, ಪೊಲೀಸ್, ಕಂದಾಯ , ನಗರಸಭೆ, ವೈದ್ಯ ಸಿಬ್ಬಂದಿ, ವಾರಿಯರ್‌ಗಳೊಂದಿಗೆ ಕೈಜೋಡಿಸಿ ವೈರಸ್ ಮುಕ್ತ ಮಾಡುವುದಕ್ಕೆ ಮುಂದಾಗೋಣ ಎಂದು ಕರೆ ನೀಡಿದರು.

# ರಾಣೇಬೆನ್ನೂರು : ವಂದೇ ಮಾತರಂ ಸಂಸ್ಥೆಯಿಂದ ಕಿಟ್‌ಗಳ ವಿತರಣೆಗೆ ಸಿದ್ಧ



ರಾಣೇಬೆನ್ನೂರು, ಜೂ.2- ಇಲ್ಲಿನ ಕುರುಬಗೇರಿಯ ವಂದೇ ಮಾತರಂ ಸ್ವಯಂ ಸೇವಾ ಸಂಸ್ಥೆಯಿಂದ ನಗರದ 5 ಸಾವಿರ ಬಡವರಿಗೆ ಅವಶ್ಯಕ ದಿನಸಿ ಕಿಟ್‌ಗಳನ್ನು ವಿತರಿಸಲಾಗುವುದು ಎಂದು ಸಂಸ್ಥೆಯ ಅಧ್ಯಕ್ಷ ಪ್ರಕಾಶ್ ಬುರಡಿಕಟ್ಟಿ ಹೇಳಿದರು.

ಅವರು ಕಿಟ್‌ಗಳನ್ನು ತಯಾರು ಮಾಡುತ್ತಿದ್ದ ಎರೇಕುಪ್ಪಿ ರಸ್ತೆಯ ಕಾಕೋಳದವರ ಕಣದಲ್ಲಿ ಮಾಧ್ಯಮದವರಿಗೆ ಮಾಹಿತಿ ನೀಡಿದರು.

ಅಕ್ಕಿ, ಸಕ್ಕರೆ, ಬೆಲ್ಲ, ಬೇಳೆ, ಗೋಧಿ ಮತ್ತು ರಾಗಿ ಹಿಟ್ಟು ಸೇರಿದಂತೆ ಉಳಿದ ದಿನಸಿ ಪದಾರ್ಥಗಳು, ಸೋಪು, ಮಾಸ್ಕ್, ಸ್ಯಾನಿಟೈಜರ್ ಮುಂತಾದವುಗಳು ಸೇರಿದಂತೆ, ಸುಮಾರು 8 ರಿಂದ 10 ದಿನಗಳಿಗಾಗಬಹುದಾದ ಸಾಮಗ್ರಿಗಳು ಕಿಟ್ ನಲ್ಲಿವೆ ಎಂದು ಬುರಡಿಕಟ್ಟಿ ವಿವರಿಸಿದರು.

ತಾಲ್ಲೂಕಿನಲ್ಲಿ 2500 ಆಟೋರಿಕ್ಷಾ ಹಾಗೂ ಸರಕು ಸಾಗಣೆ ಆಟೋಗಳ ಚಾಲಕರಿದ್ದು, ಅವರೆಲ್ಲರೂ ಆರ್‌ಸಿ ಬುಕ್ ಹಾಗೂ ಚಾಲನಾ ಪರವಾನಿಗೆ ತರಬೇಕು. ಪರಿಚಿತ ಪತ್ರದೊಂದಿಗೆ ಸಣ್ಣ ಬೀದಿ ವ್ಯಾಪಾರಸ್ಥರು, ಗೃಹರಕ್ಷಕದಳದ ಸಿಬ್ಬಂದಿಗಳಿಗೆ ಕಿಟ್ ಕೊಡಲಾಗುತ್ತಿದ್ದು, ದಿನಾಂಕ 4 ರಂದು ಶುಕ್ರವಾರ ಬೆಳಿಗ್ಗೆ 6 ಗಂಟೆಗೆ ನಗರ ಸಭೆ ಕ್ರೀಡಾಂಗಣಕ್ಕೆ ಆಗಮಿಸುವಂತೆ ಕೋರಲಾಗಿದೆ.

ನಗರಸಭೆ ಸದಸ್ಯರುಗಳಾದ ಹನುಮಂತಪ್ಪ ಹೆದ್ದೇರಿ, ನಾಗರಾಜ ಅಡ್ಮನಿ, ಸಂಸ್ಥೆಯ ಹಿತೈಷಿಗಳಾದ ರಾಘವೇಂದ್ರ ಚಿನ್ನಿಕಟ್ಟಿ, ಹೊಳಿಯಪ್ಪ ಕಾಕೋಳ, ಮಲ್ಕಪ್ಪ ಕಾಕೋ ಹಾಗೂ ಕೆಂಚೋಟಿ ಕುಟುಂಬದರು ಪಾಲ್ಗೊಂಡಿದ್ದರು.

# ನಿಯಂತ್ರಣದತ್ತ ಕೊರೊನಾ

**(1ನೇ ಪುಟದಿಂದ)** ಮನೆಯಲ್ಲೇ ಇದ್ದು ಔಷಧೋಪಚಾರ ತೆಗೆದುಕೊಳ್ಳುವ ಸಂದರ್ಭದಲ್ಲಿ ಕೆಲವರಿಗೆ ಉಸಿರಾಟದ ತೊಂದರೆಯಾಗಿ ಆಸ್ಪತ್ರೆಗಳಲ್ಲಿ ಐಸಿಯುಗೆ ದಾಖಲಾದವರಲ್ಲಿ ಸಾವಿನ ಪ್ರಕರಣಗಳು ದಾಖಲಾಗುತ್ತಿವೆ.

ಕರ್ಫ್ಯೂ ಮತ್ತು ಲಾಕ್‌ಡೌನ್, ಬಿಗಿ ಕ್ರಮ, ಹೊರ ರಾಜ್ಯದಿಂದ ವಲಸಿಗರು ಬರುವುದನ್ನು ಕಟ್ಟುನಿಟ್ಟಾಗಿ ತಡೆದಿದ್ದರಿಂದ ಶೇ. 36 ರಷ್ಟಿದ್ದ ಪಾಸಿಟಿವಿಟಿ ಈಗ ಶೇ. 8 ರಿಂದ 9ರಷ್ಟಕ್ಕೆ ಬಂದಿದೆ. ಇನ್ನೊಂದು ವಾರದಲ್ಲಿ 5 ರಿಂದ 6 ರಷ್ಟು ಬರಬಹುದೆಂಬ ನಿರೀಕ್ಷೆ ಇಟ್ಟುಕೊಳ್ಳಲಾಗಿದೆ.

ಬೆಂಗಳೂರು ಹೊರ ವಲಯವೂ ಸೇರಿದರೆ 3 ರಿಂದ 3500 ಪ್ರಕರಣಗಳು ದಾಖಲಾಗುತ್ತಿವೆ. ಗ್ರಾಮೀಣ ಪ್ರದೇಶ ಹೊರತುಪಡಿಸಿ ನಗರವನ್ನು ತೆಗೆದುಕೊಂಡರೆ ಸೋಂಕು ಒಂದು ಹಿಡಿತಕ್ಕೆ ಬಂದಿರುವುದು ಕಂಡು ಬರುತ್ತಿದೆ.

ಲಾಕ್‌ಡೌನ್ ಇದ್ದರೂ ರೈಲು, ವಿಮಾನಯಾನ ಮತ್ತು ಸರಕು ಸಾಗಾಣಿಕೆ ಸೇವೆ ಎಂದಿನಂತೆ ಇದೆ. ಅಲ್ಲದೆ, ಕೈಗಾರಿಕೆಗಳು ಕಾರ್ಯನಿರ್ವಹಿಸುತ್ತಿವೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಕಚೇರಿಗಳು, ಬ್ಯಾಂಕು ಸೇವೆ ಅಲ್ಲದೆ ಅಗತ್ಯ ಸೇವೆಗಳು ಎಂದಿನಂತೆ ಇದ್ದರೂ, ಸೋಂಕು ದೊಡ್ಡ ಪ್ರಮಾಣದಲ್ಲಿ ಇಳಿಕೆಯಾಗಿರುವುದು ಅಂಕಿ-ಅಂಶಗಳಿಂದ ಹೊರ ಬಂದಿದೆ.

## 142 ಮಂದಿ ಗರ್ಭಿಣಿಯರಿಗೆ ಹೆರಿಗೆ

**(1ನೇ ಪುಟದಿಂದ)** ಒಂದು ವೇಳೆ ಬಾಟಲಿಯಿಂದ ಮಗುವಿಗೆ ಹಾಲುಣಿಸುತ್ತಿದ್ದರೆ, ಪ್ರತಿ ಬಾರಿಯೂ ನಿಪ್ಪಲ್ ಅನ್ನು ಬಿಸಿ ನೀರಿನಿಂದ ತಪ್ಪದೇ ಸ್ವಚ್ಛಗೊಳಿಸಬೇಕು. ಸೊಂಕು ಮುಕ್ತವಾಗುವವರೆಗೂ ತಾಯಂದಿರು ಈ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಿದಲ್ಲಿ ತಾಯಿ, ಮಗುವಿನ ಆರೋಗ್ಯಕ್ಕೆ ಯಾವುದೇ ತೊಂದರೆಯಾಗುವುದಿಲ್ಲ ಎನ್ನುತ್ತಾರೆ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ. ಮೀನಾಕ್ಷಿ.

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್
**ಪ್ರಸಾದ ದಾಸೋಹ**
ಇಂದಿನ ಪ್ರಸಾದ ವಿತರಕರು
ಸ್ಫೂರ್ತಿ ಸೇವಾ ಟ್ರಸ್ಟ್(ರಿ) ದಾವಣಗೆರೆ
ಇವರಿಂದ ಸೇವಾರ್ಥ
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿಯಲ್ಲಿ
1) 40x60-ಪೂರ್ವ (35 ಲಕ್ಷಕ್ಕೆ)
2) 30x40-ಉತ್ತರ (18 ಲಕ್ಷಕ್ಕೆ)
ಕಿರಣ್ ಬೂಸ್ನೂರ್
98440-63409, 97315-63409

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ, ಡಾಲರ್ಸ್ ಕಾಲೋನಿಯಲ್ಲಿ 30x55 East, 30x50 North, 40 ಅಡಿ ರೋಡಿಗಿದೆ. 30x50 West, 30x50 North, 40x60 North, 60x45 Corner.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಲೇಔಟ್‌ನಲ್ಲಿ 40x70 West, 80x70 West, 60 ಅಡಿ ರೋಡಿಗಿದೆ. 60x40 West, 30x40 West 40 ಅಡಿ ರೋಡಿಗಿದೆ. 30x48 East.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಮನೆಗಳು ಮಾರಾಟಕ್ಕಿವೆ**
ಎಸ್.ಎಸ್. 'ಬಿ' ಬ್ಲಾಕ್ ದಕ್ಷಿಣ 30x40 ಮನೆ ಹಾಗೂ 30x40 ಕೆಳಗೆ ಮನೆ ಮೇಲೆ ಒಂದು ರೂಂ. ಬಸವೇಶ್ವರ ಲೇ ಔಟ್, ಪೂರ್ವ, 30x40 ಕೆಳಗೆ ಮತ್ತು ಮೇಲೆ ಮನೆ ಮತ್ತು ಮೇಲೆ ಒಂದು ರೂಂ. 30x45 ಪಶ್ಚಿಮ, ಎಸ್.ಎಸ್. ಹೈಟೆಕ್ ಉತ್ತರ 30x50 ಸಂಪರ್ಕಿಸಿ
ಐಗೂರು ವಿಜಯಕುಮಾರ್
99457 02495
ಸುರೇಶ್ 95911 60520

**ಕಟ್ಟಡ ಲೀಸ್/ಬಾಡಿಗೆಗೆ ಇದೆ**
ಪಿ.ಜೆ. ಬಡಾವಣೆಯ ಅಕ್ಕಮಹಾದೇವಿ ರಸ್ತೆಯಲ್ಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಹೋಟೆಲ್, ಲಾಡ್ಜಿಂಗ್, ಕಾಲೇಜ್, ಬ್ಯಾಂಕ್, ಆಫೀಸ್‌ಗಳಿಗೆ ಯೋಗ್ಯವಾದ ಕಟ್ಟಡ ಸುಮಾರು 15 ರಿಂದ 20 ರೂಂಗಳು, 4 ರಿಂದ 5 ದೊಡ್ಡ ಹಾಲ್ ಗಳುಳ್ಳ ಸುಮಾರು 5000 ದಿಂದ 10000 ಅಡಿಗಳುಳ್ಳ ಕಟ್ಟಡ ತಮ್ಮ ಅನುಕೂಲಕ್ಕೆ ತಕ್ಕಂತೆ ಆಲ್ಟ್ರೇಷನ್ ಮಾಡಿ ಕೊಳ್ಳಬಹುದಾಗಿರುವ ಕಟ್ಟಡ ಲೀಸ್‌ಗೆ/ ಬಾಡಿಗೆಗೆ ದೊರೆಯಲಿದೆ. ಸಂಪರ್ಕಿಸಿ :
98441 37228
98441 27448

**ಪ್ರತಿಷ್ಠಿತ CBSE ಶಾಲೆಗೆ ಅನುಭವಿ ಶಿಕ್ಷಕರು ಬೇಕಾಗಿದ್ದಾರೆ**
Primary Maths - 01
Primary Science - 01
Primary Hindi - 02
ಸಂಪರ್ಕಿಸಿ : 9844443223, 7378392875, 9538688975

**ಭದ್ರಾ ನ್ಯಾಚುರಲ್ಸ್**
ಮೆಡ್ ಪ್ಲಸ್ ಎದುರು, ರಾಂ ಅಂಡ್ ಕೋ ಸರ್ಕಲ್ ಹತ್ತಿರ ದಾವಣಗೆರೆ.
ಆಯುರ್ವೇದಿಕ್ ಔಷಧಗಳು
ರೋಗ ನಿರೋಧಕ ಶಕ್ತಿವೃದ್ಧಿಯ ಪೋಷಕಾಂಶಗಳು, ಮನೆ ಮದ್ದುಗಳು ಒಂದೇ ಸೂರಿನಡಿ
ಸಂಪರ್ಕಿಸಿ: ಮೆಳ್ಳೇಕಟ್ಟೆ ಬಸವರಾಜ್ ಬಿ.ಎಸ್ಸಿ (ಅಗ್ರಿ)
94483 23796
76761 38170

**Wanted Teachers**
Qualification :
1) B.A. B.Ed - English - 02
2) B.Sc., B.Ed - PCM - 02 CBZ - 03
3) B.A., B.Ed - Hindi - 02
4) B.A. B.Ed - Social - 02
SJM English Medium Public School
80734 81049, 90197 38735

**ಭವಿಷ್ಯ Astrologer**
ಮೋಡಿ ಮಾಂತ್ರಿಕ ಗಿಡ್ಡಪ್ಪ
ಶ್ರೀ ಚೌಡೇಶ್ವರಿ ಭೂತರಾಯ ಆರಾಧಕರು. 48 ಗಂಟೆಯಲ್ಲಿ ಪರಿಹಾರ. ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ವ್ಯಾಪಾರದಲ್ಲಿ ಲಾಭ-ನಷ್ಟ,ಮಾಟ-ಮಂತ್ರ, ಆರೋಗ್ಯ , ಲೈಂಗಿಕ. ಸಮಸ್ಯೆ, ಸಾಲಬಾಧೆ, ಮನ:ಪ್ರೇತಬಾಧೆ,ವಶೀಕರಣ, ಅಂಗುಷ್ಠ ವಶೀಕರಣ, ಇಷ್ಟಪಟ್ಟವರು ನಿಮ್ಮಂತೆ ಆಗಲು ನಮ್ಮಲ್ಲಿ ಶಾಶ್ವತ ಪರಿಹಾರ. ಇಂದೇ ಕರೆ ಮಾಡಿ
99807 70791


**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
1) ಕಾಲ್‌ಸೆಂಟರ್- ಗರ್ಲ್
2) ಡೆಲಿವರಿ-ಬಾಯ್ಸ್- (ಸೈಕಲ್ ಇದ್ದವರಿಗೆ ಆದ್ಯತೆ)
3) ಸೇಲ್ಸ್ ಬಾಯ್ಸ್ - ಕಾಂಟ್ಯಾಕ್ಟ್
ಶ್ರೀ ಕುರುವತ್ತಿ ಬಸವೇಶ್ವರ ಫಾರ್ಮಾ
1ನೇ ಫ್ಲೋರ್, ಕಾಲೇಜ್ ರೋಡ್, ಪಿ.ಜೆ. ಬಡಾವಣೆ, ಡಾ॥ ಆಲೂರು ಮಂಜುನಾಥ್ ಹಾಸ್ಪಿಟಲ್ ಪಕ್ಕ, ದಾವಣಗೆರೆ.
ಮೊ. : 95132 22192

**ಪುರುಷರು/ಮಹಿಳೆಯರು**
ಸಾಮಾನ್ಯ ಕಂಪ್ಯೂಟರ್ ಜ್ಞಾನವುಳ್ಳವರಿಗೆ ಆನ್‌ಲೈನ್‌ನಲ್ಲಿ ಆದಾಯಗಳಿಸಲು ರಿಜಿಸ್ಟ್ರೇಷನ್‌ಗಾಗಿ ಕರೆ ಮಾಡಿ.
ಮೊ. : 87620 24160

ಅನ್ನವೇ ದೇವರು
**ಕರುಣಾ ಜೀವ ಕಲ್ಯಾಣ ಟ್ರಸ್ಟ್**
ಇಂದಿನ ಅನ್ನದಾಸೋಹ ದಾಸೋಹಿಗಳು
ಪರಮೇಶ್ವರಪ್ಪ ಎಂ.
ನಿವೃತ್ತ ಪ್ರಾಧ್ಯಾಪಕರು, ಎ.ವಿ.ಕೆ. ಕಾಲೇಜು
ಧನ ಸಹಾಯ ಮಾಡುವವರು ಸಂಪರ್ಕಿಸಿ
91104 55199

# ಸ್ನೇಹಿತನನ್ನು ಕೊಂದ ಆರೋಪಿಯ ಬಂಧನ



ಹರಿಹರ

ಹರಿಹರ, ಜೂ.2- ವ್ಯಕ್ತಿಯೊಬ್ಬನನ್ನು ಕೊಲೆ ಮಾಡಿ ಚಾನಲ್‌ನಲ್ಲಿ ಎಸೆದಿರುವ ಘಟನೆ ನಗರದ ಹೊರ ವಲಯದಲ್ಲಿರುವ ಶೇರಾಪುರ ಗ್ರಾಮದಲ್ಲಿ ನಡೆದಿದೆ.

ಮೃತ ವ್ಯಕ್ತಿ, ನಗರದ ತೆಗ್ಗಿನಕೇರಿ ನಿವಾಸಿಯಾದ ಅಶ್ವಪತ್ಥ್ ಖಾನ್ (21) ಎಂದು ಗುರುತಿಸಲಾಗಿದೆ .

ಕೇಬಲ್ ಆಪರೇಟರ್ ಅಕ್ಬರ್ ಖಾನ್ ಎಂಬುವರ ಮಗ ಕಳೆದ 2 ದಿನಗಳಿಂದ ನಾಪತ್ತೆಯಾಗಿದ್ದು, ಇಂದು ಬೆಳಿಗ್ಗೆ ಮಗನ ಸ್ನೇಹಿತನನ್ನು ಕೇಳಲಾಗಿ, ಚಾನಲ್‌ವೊಂದರಲ್ಲಿ ಹೆಣವಾಗಿ ಬಿದ್ದ ಸ್ಥಳಕ್ಕೆ ಕರೆದುಕೊಂಡು ಬಂದು ತೋರಿಸಿದ್ದಾನೆಂದು ಮೃತ ತಂದೆ ಹೇಳಿಕೆ ನೀಡಿದ್ದಾರೆ.

ತರಗಾರ ಕೆಲಸ ಮಾಡುವ ರೋಷನ್ ಎಂಬ ವ್ಯಕ್ತಿಯನ್ನು ಹರಿಹರ ನಗರ ಠಾಣೆಯ ಪಿಎಸ್ ಐ ಸುನಿಲ್ ತೇಲಿ, ಗ್ರಾಮಾಂತರ ಪಿಎಸ್‌ಐ ಡಿ. ರವಿಕುಮಾರ್ ಹಾಗೂ ಪೊಲೀಸರು ಕೆಲವೇ ಗಂಟೆಗಳಲ್ಲಿ ವ್ಯಕ್ತಿಯನ್ನು ವಶಕ್ಕೆ ಪಡೆದಿದ್ದಾರೆ ಎಂದು ತಿಳಿದುಬಂದಿದೆ.


ಮೃತ ಅಶ್ವಪತ್ಥ್ ಖಾನ್ ಮತ್ತು ಸ್ನೇಹಿತ ರೋಷನ್ ಇವರಿಬ್ಬರ ಮಧ್ಯೆ ಯುವತಿ ವಿಚಾರವಾಗಿ ಮಾತಿಗೆ ಮಾತು ಬೆಳೆದು ಜೀವ ಬಲಿ ತೆಗೆದುಕೊಳ್ಳುವುದಕ್ಕೆ ಕಾರಣವಾಗಿರಬಹುದೆಂದು ಶಂಕಿಸಲಾಗಿದೆ ಎಂದು ತಿಳಿದು ಬಂದಿದೆ.

ದಾವಣಗೆರೆ ಗ್ರಾಮಾಂತರ ಉಪ ವಿಭಾಗದ ಅಧೀಕ್ಷಕ ನರಸಿಂಹ ವಿ ತಾಮ್ರಧ್ವಜ್, ಎಸ್‌ಐಗಳಾದ ಡಿ. ರವಿಕುಮಾರ್, ಸುನೀಲ್ ಬಸವರಾಜ ತೇಲಿ, ಪ್ರೊಬೇಷನರಿ ಪಿಎಸ್‌ಐ ಸಿದ್ದಣ್ಣ, ಕರಿಯಪ್ಪ, ಟಿ.ವಿ. ಸತೀಶ್, ರಮೇಶ್, ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿ ಮುಂದಿನ ತನಿಖೆ ಕೈಗೊಂಡಿರುದ್ದಾರೆ.

# ಆರ್ಯ ವೈಶ್ಯ ಸಮಾಜಕ್ಕೆ ಕಾನ್ಸಂಟ್ರೇಟರ್ ಕೊಡುಗೆ

ಆರ್ಯವೈಶ್ಯ ಸಮಾಜದ ಜನರಿಗೆ ಉಪಯೋಗವಾಗಲು ಉದ್ಯಮಿ ಮಂಜುನಾಥ್ ಗುಂಡಾಲ್ ತಮ್ಮ ಶಿಂಸಾ ಫೌಂಡೇಶನ್‌ನಿಂದ 3 ಕಾನ್ಸಂಟ್ರೇಟರ್‌ಗಳನ್ನು ಇಂದು ಉಚಿತವಾಗಿ ನೀಡಲಿದ್ದಾರೆ. ಗುಂಡಾಲ್ ಬಿಸಿನೆಸ್ ಡಾಟಾ ಸಲ್ಯೂಶನ್ ಬಳಿ ಬೆಳಿಗ್ಗೆ 11ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಜಿ.ಎಂ.ಸಿದ್ದೇಶ್ವರ, ಮಹಾಂತೇಶ್ ಬೀಳಗಿ, ಹನುಮಂತರಾಯ ಆಗಮಿಸುವರು.

# ಪತ್ರಕರ್ತ ಬಸವರಾಜ್ ಪುತ್ರ ವಿನಯ್ ಸಾವು



ಕೂಡ್ಲಿಗಿ, ಜೂ.2- ತಾಲ್ಲೂಕಿನ ಪತ್ರಕರ್ತ ಹಿ.ಮ. ಬಸವರಾಜ್ ಅವರ ಪುತ್ರ ಹಿ.ಮ. ವಿನಯ್ (26) ಬಾಗಲಕೋಟೆ ಆಸ್ಪತ್ರೆಯಲ್ಲಿ ಅಕಾಲಿಕವಾಗಿ ನಿನ್ನೆ ಸಾವಿಗೀಡಾಗಿದ್ದಾರೆ. ಹಿರೇಕುಂಬಳಗುಂಟೆ ಗ್ರಾಮದ ಹಿ.ಮ.ವಿನಯ್ ಐಟಿ ಉದ್ಯೋಗಿಯಾಗಿದ್ದರು.

# ಕೇಂದ್ರದ ಲಸಿಕಾ ನೀತಿ ವಿವೇಚನಾ ರಹಿತ

**(1ನೇ ಪುಟದಿಂದ)** ಸಂವಿಧಾನ ತಿಳಿಸಿಲ್ಲ ಎಂದು ಹೇಳಿದೆ.

ಕೇಂದ್ರ ಸರ್ಕಾರ ತನ್ನ ಬಜೆಟ್‌ನಲ್ಲಿ 35 ಸಾವಿರ ಕೋಟಿ ರೂ.ಗಳನ್ನು ಲಸಿಕೆಗಾಗಿ ಮೀಸಲಿಟ್ಟಿತ್ತು. ನಂತರ ಲಸಿಕೆ ನೀತಿಯನ್ನು ಉದಾರೀಕರಣಗೊಳಿಸಲಾಗಿದೆ. ಈ ಹಣವನ್ನು ಇದುವರೆಗೂ ಯಾವ ರೀತಿ ಬಳಸಿಕೊಂಡಿದೆ ಹಾಗೂ 18-44 ವರ್ಷದವರಿಗೆ ಏಕೆ ಉಚಿತ ಲಸಿಕೆ ನೀಡುತ್ತಿಲ್ಲ ಎಂದು ನ್ಯಾಯಾಲಯ ಪ್ರಶ್ನಿಸಿದೆ. ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್, ಎಲ್. ನಾಗೇಶ್ವರ ರಾವ್ ಹಾಗೂ ಎಸ್. ರವೀಂದ್ರ ಭಟ್ ಅವರನ್ನು ಒಳಗೊಂಡ ಪೀಠ ಕೊರೊನಾ ನಿರ್ವಹಣೆ ಕುರಿತು ಪರಿಶೀಲಿಸುವಾಗ ಈ ಬಗ್ಗೆ ಆದೇಶ ಹೊರಡಿಸಿದೆ.

ನ್ಯಾಯಾಲಯ ಪ್ರಸ್ತಾಪಿಸಿರುವ ಅಂಶಗಳನ್ನು ಪರಿಗಣಿಸಿ, ಲಸಿಕಾ ನೀತಿಯನ್ನು ಪುನರ್ ಪರಿಶೀಲಿಸಬೇಕು ಎಂದು ನ್ಯಾಯಾಲಯ ತಿಳಿಸಿದೆ. ಕೊರೊನಾದ ಎರಡನೇ ಅಲೆಯಲ್ಲಿ 18-44 ವರ್ಷದವರು ತೀವ್ರ ಪರಿಣಾಮ ಎದುರಿಸಿದ್ದಾರೆ ಹಾಗೂ ಸಾವುಗಳು ಸಂಭವಿಸಿವೆ. ಕೊರೊನಾದ ಬದಲಾದ ಸ್ವಭಾವದಿಂದಾಗಿ 18-44 ವರ್ಷದವರಿಗೂ ಲಸಿಕೆಯ ಅಗತ್ಯತೆ ಎದುರಾಗಿದೆ. ವೈಜ್ಞಾನಿಕವಾಗಿ ವಿವಿಧ ವಯೋಮಾನದವರಿಗೆ ಆದ್ಯತೆ ನೀಡುವುದನ್ನು ಮುಂದುವರೆಸಬೇಕಿದೆ ಎಂದು ನ್ಯಾಯಾಲಯ ಹೇಳಿದೆ.

ಯಾವ ಪ್ರಮಾಣದ ಜನಸಂಖ್ಯೆಗೆ ಒಂದು ಹಾಗೂ ಎರಡು ಡೋಸ್ ಲಸಿಕೆ ನೀಡಲಾಗಿದೆ. ಯಾವ ಪ್ರಮಾಣದಲ್ಲಿ ನಗರ ಪ್ರದೇಶ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಲಸಿಕೆ ನೀಡಲಾಗಿದೆ ಎಂಬ ಬಗ್ಗೆಯೂ ನ್ಯಾಯಾಲಯ ವಿವರ ಕೇಳಿದೆ.

ಕೋವ್ಯಾಕ್ಸಿನ್, ಕೋವಿಶೀಲ್ಡ್ ಹಾಗೂ ಸ್ಪುಟ್ನಿಕ್ - ವಿ ಲಸಿಕೆಗಳನ್ನು ಇದುವರೆಗೂ ಖರೀದಿಸಿದ ಬಗ್ಗೆಯೂ ಸಂಪೂರ್ಣ ವಿವರ ನೀಡಬೇಕೆಂದು ನ್ಯಾಯಾಲಯ ಕೇಳಿದೆ. ರಾಜ್ಯಗಳು ತನ್ನ ಜನರಿಗೆ ಉಚಿತವಾಗಿ ಲಸಿಕೆ ನೀಡುತ್ತಿವೆ ಎಂದು ಕೇಂದ್ರ ಸರ್ಕಾರ ಹೇಳಿದ್ದನ್ನು ಪರಿಗಣಿಸಿರುವ ನ್ಯಾಯಾಲಯ, ಪ್ರತಿಯೊಂದು ರಾಜ್ಯ ಈ ಬಗ್ಗೆ ತನ್ನ ನಿಲುವನ್ನು ತಿಳಿಸಬೇಕು ಎಂದು ಹೇಳಿದೆ.

**ಕಡ್ಲೇಬಾಳು ಕೆ.ಕೆ. ನಾರಪ್ಪ ನಿಧನ**



ದಾವಣಗೆರೆ ತಾಲ್ಲೂಕು ಬಿ. ಕಲಪನಹಳ್ಳಿ ಗ್ರಾಮದ ವಾಸಿ
**ಕಡ್ಲೇಬಾಳು ಕೆ.ಕೆ. ನಾರಪ್ಪ** (62)
ಅವರು ದಿನಾಂಕ 2.06.2021ರಂದು ಬುಧವಾರ ಬೆಳಿಗ್ಗೆ 11.30ಕ್ಕೆ ನಿಧನರಾಗಿದ್ದಾರೆ.
ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 2.06.2021ರಂದು ಬುಧವಾರ ಸಂಜೆ 4 ಗಂಟೆಗೆ ಬಿ.ಕಲಪನಹಳ್ಳಿಯ ಅವರ ತೋಟದಲ್ಲಿ ನೆರವೇರಿತು.
**ಇಂತಿ ದುಃಖತಪ್ತರು**
ಪತ್ನಿ: ಶ್ರೀಮತಿ ಸುಜಾತ
ರಾಜೇಶ್ವರಿ, ಕಿರಣ್, ವರುಣ್, ಕೀರ್ತನ

**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 02.06.2021ರಂದು ಅಕಾಲಿಕವಾಗಿ ನಿಧನರಾದ ನಮ್ಮ ಆತ್ಮೀಯರಾದ
**ಶ್ರೀ ಅನಂತ ರೇವಣಕರ್**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ಅವರುಗಳ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.
**ಸತ್ಯನಾರಾಯಣ ಆರ್. ರಾಯ್ಕರ್**
ಅಧ್ಯಕ್ಷರು, ದೈವಜ್ಞ ಸಮಾಜ ಸಂಘ (ರಿ.), ದಾವಣಗೆರೆ.

## ಕೊರೊನಾ : ಕೇಂದ್ರದ ವಾದ ಒಪ್ಪದ ಸುಪ್ರೀಂ

ನವದೆಹಲಿ, ಜೂ. 1 – ಕಾರ್ಯಾಂಗದ ನೀತಿಗಳು ನಾಗರಿಕರ ಹಕ್ಕುಗಳನ್ನು ಉಲ್ಲಂಘಿಸಿದಾಗ ನ್ಯಾಯಾಲಯಗಳು ಮೌನವಾಗಿರಬೇಕು ಎಂದು ಭಾರತದ ಸಂವಿಧಾನ ತಿಳಿಸಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಕೊರೊನಾ ನಿರ್ವಹಣೆಯಲ್ಲಿ ನ್ಯಾಯಾಲಯಗಳು ಮಧ್ಯ ಪ್ರವೇಶಿಸಬಾರದು ಎಂದು ಕೇಂದ್ರ ಸರ್ಕಾರ ಹೇಳಿರುವುದನ್ನು ತಳ್ಳಿ ಹಾಕುವಾಗ ಸುಪ್ರೀಂ ಕೋರ್ಟ್ ಈ ಟಿಪ್ಪಣಿ ಮಾಡಿದೆ.

ಕೊರೊನಾದ ಎರಡನೇ ಅಲೆಯನ್ನು ಎದುರಿಸಲು ಹೆಣಗಾಡುತ್ತಿರುವಾಗ ಕಾರ್ಯಾಂಗದ ಬುದ್ಧಿವಂತಿಕೆಯನ್ನು ಮರು ವಿಚಾರ ಮಾಡಲು ಬಯಸುವುದಿಲ್ಲ. ಆದರೆ, ಕಾರ್ಯಾಂಗ ಆಯ್ದುಕೊಂಡಿರುವ ನೀತಿ ಎಲ್ಲ ಜನರ ಜೀವಿಸುವ ಹಕ್ಕುಗಳನ್ನು ರಕ್ಷಿಸುವಂತಿದೆಯೇ ಮತ್ತು ಈ ನೀತಿಗಳು ಸಕಾರಣವಾಗಿವೆಯೇ ಎಂಬುದನ್ನು ಪರಿಶೀಲಿಸುವುದಾಗಿ ತಿಳಿಸಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್, ಎಲ್.ಎನ್. ರಾವ್ ಹಾಗೂ ಎಸ್. ರವೀಂದ್ರ ಭಟ್ ಅವರನ್ನು ಒಳಗೊಂಡ ವಿಶೇಷ ಪೀಠ ಕೊರೊನಾ ಕುರಿತು ಸ್ವಯಂ ಪ್ರೇರಿತ ವಿಚಾರಣೆ ನಡೆಸುತ್ತಿದೆ.

## ಎಸ್ಸೆಸ್ಸೆಲ್ಸಿ, ಪಿಯು ಪರೀಕ್ಷೆಗೆ ಒತ್ತಾಯ

ದಾವಣಗೆರೆ, ಜೂ.2- ರಾಜ್ಯ ಸರ್ಕಾರ ಸೂಕ್ತ ಸಮಯ ನೋಡಿ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆ ನಡೆಸುವುದು ಉತ್ತಮ ಎಂದು ಎಸ್‌ಎಫ್‌ಐ ಅಭಿಪ್ರಾಯ ಪಟ್ಟಿದೆ.

ಮುಂದಿನ ಪೀಳಿಗೆಯ ವಿದ್ಯಾರ್ಥಿಗಳು ಶೈಕ್ಷಣಿಕ ವಿಚಾರದಲ್ಲಿ ಆಸಕ್ತಿಯಿಂದ ತೊಡಗಿಕೊಳ್ಳ ಬೇಕಿದೆ. ಕೊರೊನಾ ಹಾವಳಿ ಇಳಿಮುಖವಾಗಿ ಒಂದು ತಿಂಗಳು ತಡವಾದರೂ ಸರಿ, ಪರೀಕ್ಷೆಗಳನ್ನು ನಡೆಸುವುದು ಉತ್ತಮ. ಸರ್ಕಾರ ಶೈಕ್ಷಣಿಕ ಮತ್ತು ಪರೀಕ್ಷೆ ವಿಚಾರದಲ್ಲಿ ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡು ವಿದ್ಯಾರ್ಥಿಗಳಿಗೆ ಹಾಗೂ ಪೋಷಕರಿಗೆ ಧೈರ್ಯ ತುಂಬುವಂತಹ ಕೆಲಸ ಮಾಡಬೇಕು.

ಮುಂಬರುವ ಸಿಇಟಿ, ನೀಟ್, ಜೆಇಇ ಪರೀಕ್ಷೆಗೆಳಿಗೆ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ನಿರಂತರವಾಗಿ ವಿದ್ಯಾಭ್ಯಾಸ ಮುಂದುವರೆಸಬೇಕಿದೆ ಎಂದು ಎಸ್‌ಎಫ್‌ಐ ದಾವಣಗೆರೆ ಘಟಕದ ಸಹ ಸಂಚಾಲಕ ಇಫ್ತೇಕಾರ್ ಅಹ್ಮದ್ ಬಿಳಿಚೋಡು ಹೇಳಿದ್ದಾರೆ.

## ಮೆರಿಟ್ ಆಧಾರದದಲ್ಲಿ ಸಿಇಟಿಗೆ ಅವಕಾಶ ಕಲ್ಪಿಸಿ

ದಾವಣಗೆರೆ, ಜೂ.2- 12ನೇ ತರಗತಿಯ ಮೆರಿಟ್ ಆಧಾರದ ಮೇಲೆ ಸಾಮಾನ್ಯ ಪ್ರವೇಶ ಪರೀಕ್ಷೆ ಬರೆಯಲು ಸರ್ಕಾರ ಆದೇಶ ನೀಡಬೇಕಾಗಿದೆ ಎಂದು ರೈತ ಮುಖಂಡ ಎಂ.ಎಸ್.ಕೆ ಶಾಸ್ತ್ರಿ ಸಲಹೆ ನೀಡಿದ್ದಾರೆ.

12ನೇ ತರಗತಿ ನಂತರದ ವಿದ್ಯಾಭ್ಯಾಸಕ್ಕೆ ಸಾಮಾನ್ಯ ಪ್ರವೇಶ ಪರೀಕ್ಷೆ ಅಗತ್ಯವಾಗಿದೆ ಮತ್ತು ಮೆರಿಟ್ ಆಧಾರ ದಲ್ಲಿ ಈ ಪರೀಕ್ಷೆ ನಡೆಸಬೇಕು. 7ನೇ ತರಗತಿಯಿಂದ 11ನೇ ತರಗತಿಗಳ ಅಂಕ ಪಟ್ಟಿಗಳನ್ನು ಹಾಗೂ 11ನೇ ತರಗತಿಯ ಕಿರು ಪರೀಕ್ಷೆಗಳಲ್ಲಿ ಪಡೆದ ಅಂಕಗಳನ್ನು ಪರಿಗಣನೆಗೆ ತೆಗೆದುಕೊಂಡು 12ನೇ ತರಗತಿ ಅಂಕಪಟ್ಟಿ ಸಿದ್ದಪಡಿಸು ವಂತೆ ಶಾಸ್ತ್ರಿ ಸಲಹೆ ನೀಡಿ ದ್ದಾರೆ. 11 ರಿಂದ 12 ತರಗತಿಗೆ ಈ ವರೆಗಿನ ವಿದ್ಯಾರ್ಥಿಗಳು ಶೇ. 80 ರಷ್ಟು ಹಾಜರಾತಿ ಯನ್ನು ಪರಿಗಣಿಸುವಂತೆ ಅವರು ಮನವಿ ಮಾಡಿದ್ದಾರೆ.

## ಜಿಲ್ಲಾ ಪಂಚಾಯಿತಿಗೆ ಉಮಾಶಂಕರ್ ಆಡಳಿತಾಧಿಕಾರಿ

ದಾವಣಗೆರೆ, ಜೂ.2- ದಾವಣಗೆರೆ ಜಿಲ್ಲಾ ಪಂಚಾಯಿತಿ ಆಡಳಿತಾಧಿಕಾರಿಯಾಗಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ಅವರು ಮೊನ್ನೆ ಅಧಿಕಾರ ವಹಿಸಿಕೊಂಡಿದ್ದಾರೆ.

## ರೈಲುಗಳು ಕಡಿಮೆ ಇದ್ದರೂ 8,700 ಸಾವು

ನವದೆಹಲಿ, ಜೂ. 2 - 2020ರಲ್ಲಿ ಪ್ರಯಾಣಿಕರ ರೈಲುಗಳ ಸೇವೆ ಬಹಳ ಪ್ರಮಾಣದಲ್ಲಿ ಕಡಿತಗೊಳಿಸಿದ್ದರೂ, 8,700ಕ್ಕೂ ಹೆಚ್ಚು ಜನರು ಹಳಿಗಳ ಮೇಲೆ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರೈಲ್ವೆ ಮಂಡಳಿ ಈ ಸಾವುಗಳ ವಿವರಗಳನ್ನು ಮಾಹಿತಿ ಹಕ್ಕು ಕಾಯ್ದೆಯಡಿ ದಾಖಲಿಸಲಾದ ಅರ್ಜಿಗೆ ತಿಳಿಸಿದೆ. ಮಧ್ಯ ಪ್ರದೇಶದ ಚಂದ್ರಶೇಖರ್ ಗೌರ್ ಎಂಬುವವರು ಮಾಹಿತಿ ಕೋರಿ ಅರ್ಜಿ ಸಲ್ಲಿಸಿದ್ದರು.


ಜನವರಿ 2020ರಿಂದ ಡಿಸೆಂಬರ್ 2020ರ ನಡುವೆ 8,733 ಜನರು ರೈಲ್ವೆ ಹಳಿಗಳ ಮೇಲೆ ಸಾವನ್ನಪ್ಪಿದ್ದಾರೆ ಎಂದು ರೈಲ್ವೆ ಮಂಡಳಿ ತಿಳಿಸಿದೆ.

ಮೃತರಲ್ಲಿ ಹಲವರು ವಲಸೆ ಕಾರ್ಮಿಕರಾಗಿದ್ದಾರೆ. ರಸ್ತೆ ಹಾಗೂ ಹೆದ್ದಾರಿಗಳಿಗಿಂತ ರೈಲ್ವೆ ಮಾರ್ಗ ಹತ್ತಿರದ್ದು ಎಂದು ಭಾವಿಸಿದ್ದ ಹಲವು ವಲಸೆ ಕಾರ್ಮಿಕರು, ಇಲ್ಲಿ ಸಾಗುವಾಗ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಅಲ್ಲದೇ ಲಾಕ್‌ಡೌನ್ ನಿಯಮಗಳ ಕಾರಣದಿಂದಾಗಿ ಪೊಲೀಸರ ಕಣ್ತಪ್ಪಿಸಲು ರೈಲ್ವೆ ಮಾರ್ಗ ಬಳಕೆ ಸೂಕ್ತ ಎಂದೂ ಕಾರ್ಮಿಕರು ಭಾವಿಸಿದ್ದರು. ಮಾರ್ಗ ಮಧ್ಯೆ ದಾರಿ ತಪ್ಪುವುದಿಲ್ಲ ಎಂಬ ನಂಬಿಕೆಯೂ ಅವರಲ್ಲಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ರಾಜ್ಯದಲ್ಲಿನ ಹೆಚ್ಚುವರಿ ವಿದ್ಯುತ್ ಮಾರಾಟಕ್ಕೆ ಸಿಎಂ ಸೂಚನೆ

ಬೆಂಗಳೂರು, ಜೂನ್ 2- ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಬೇಡಿಕೆಗಿಂತ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ದೀರ್ಘಾವಧಿ ಒಪ್ಪಂದದ ಮೂಲಕ ಮಾರಾಟಕ್ಕೆ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಧಿಕಾರಿಗಳಿಗೆ ಸೂಚಿಸಿದರು.



ಅವರು ಇಂದು ರಾಜ್ಯದ ವಿದ್ಯುತ್ ಪೂರೈಕೆ ಸ್ಥಿತಿ ಗತಿ ಹಾಗೂ ಕೈಗಾರಿಕೆಗಳಿಗೆ ವಿದ್ಯುತ್ ಪೂರೈಕೆಗೆ ಸಂಬಂಧಿಸಿದಂತೆ ಹಮ್ಮಿಕೊಂಡಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಯ ಸ್ಥಾಪಿತ ಸಾಮರ್ಥ್ಯ 30,562.56 ಮೆಗಾವ್ಯಾಟ್ ನಷ್ಟಿದ್ದು, ಶೇ. 50 ರಷ್ಟು ನವೀಕರಿಸಬಹುದಾದ ಇಂಧನ ಮೂಲಗಳಿಂದ ಉತ್ಪಾದಿಸಲಾಗುತ್ತಿದೆ. ಪ್ರಸ್ತುತ ರಾಜ್ಯದಲ್ಲಿ ವಿದ್ಯುತ್ ಕೊರತೆ ಇರುವುದಿಲ್ಲ. ರಾಜ್ಯದ ಜಲಾಶಯಗಳಲ್ಲಿ ಸಾಕಷ್ಟು ನೀರು ಇರುವುದರಿಂದ ಹಾಗೂ ಈ ಬಾರಿ ಮುಂಗಾರು ಸಾಮಾನ್ಯವಾಗಿರುವುದು ಎಂದು ಭಾರತೀಯ ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿರುವ ಹಿನ್ನೆಲೆಯಲ್ಲಿ ವಿದ್ಯುತ್ ಕೊರತೆಯಾಗದು ಎಂದು ಅಧಿಕಾರಿಗಳು ವಿವರಿಸಿದರು.

ವಿದ್ಯುತ್ ಪ್ರಸರಣ ಜಾಲದಲ್ಲಿ ವಿದ್ಯುತ್ ಸೋರಿಕೆ ಅತಿ ಕಡಿಮೆ ಅಂದರೆ ಸುಮಾರು ಶೇ. 3 ರಷ್ಟು ಇದ್ದು, ದೇಶದಲ್ಲಿ ಎರಡನೇ ಸ್ಥಾನದಲ್ಲಿದೆ. ವಿತರಣಾ ಜಾಲದಲ್ಲಿಯೂ ವಿದ್ಯುತ್ ಸೋರಿಕೆ ಶೇ. 5ಕ್ಕಿಂತ ಕಡಿಮೆಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

## ಸೈಕಲ್ ಬಳಸಿ - ಇಂಧನ ಉಳಿಸಿ

(ಇಂದು ವಿಶ್ವ ಬೈಸಿಕಲ್ ದಿನಾಚರಣೆ)



ಸೈಕಲ್ ಬಳಕೆಯು ಪರಿಸರ ಸ್ನೇಹಿ
ಉಳಿಸುವುದಿಂಧನ ಇದು ದಿನವಹಿ,
ಖರ್ಚೂ ಇಲ್ಲ, ಹೊಗೆಯೂ ಇಲ್ಲ
ಉತ್ತಮ ವ್ಯಾಯಾಯಮ ದೇಹಕ್ಕೆಲ್ಲ.

ಕಿವಿಗಡಚಿಕ್ಕುವ ಶಬ್ದವು ಇಲ್ಲ
ಕೆಟ್ಟು ನಿಲ್ಲುವ ಪ್ರಮೇಯವಿಲ್ಲ
ಪಾರ್ಕಿಂಗಿಗೆ ತುಸು ಜಾಗವೆ ಸಾಕು
ದುಬಾರಿಯಲ್ಲ ಇದನು ಕೊಳ್ಳಲಿಕು.

ವಾಹನವಾದರು ಹೆಲ್ಮೆಟ್ ಬೇಡ
ಇದರಲಿ ಕಡಿಮೆ ಅಪಘಾತ ಕೂಡ,
ಪಂಕ್ಚರ್ ಆದರೆ, ರಿಪೇರಿ ಸುಲಭ
ವ್ಯಾಯಾಮ ಕಾಲಿಗೆ ಇದುಬಲು ಲಾಭ.

ಪೆಡಲಿಂಗ್ ಮಾತ್ರವೇ ಇದಕಾಹಾರ
ಗಾಲಿಗೆ ಗಾಳಿ ಇರಬೇಕು ಪೂರ,
ಸುಲಭದ ಬ್ರೇಕು, ಸರಳವುಲಾಕು
ಎಲ್ಲವು ಸಿಂಪಲ್ ಇನ್ನೇನು ಬೇಕು.

ವಿಜ್ಞಾನಿಯಾಗಿ ಅಬ್ದುಲ್ ಕಲಾಮರು
ಸೈಕಲ್ ಮೇಲೆಯೇ ಕ್ಷಿಪಣಿ ಒಯ್ದರು
ಗಾಂಧೀಜಿ ಕೂಡಾ ಸೈಕಲ್ ತುಳಿದರು
ಮಹಾನ್ ವ್ಯಕ್ತಿಗಳೂ ಸೈಕಲ್ ಸವಾರರು.

ಎತ್ತಿಡಲಿಕ್ಕೂ ಇದು ಬಲು ಹಗುರ
ಸವಾರಿ ಹೊರಟರೆ ಅನುಭವ ಮಧುರ,
ಎಷ್ಟು ಹೇಳಲಿ ಹೊಗಳಿ, ಹಾಡಿ
ನೀವೇ ಸೈಕಲ್ ಬಳಸಿಯೇ ನೋಡಿ.

- ಹೆಚ್.ಬಿ.ಮಂಜುನಾಥ್,
ಹಿರಿಯ ಪತ್ರಕರ್ತ

## ಎಸ್ಸೆಸ್ಸೆಲ್ಸಿ ಪರೀಕ್ಷೆ ರದ್ದತಿಗೆ ಒಲವು

(1ನೇ ಪುಟದಿಂದ) ಪ್ರೌಢ ಶಿಕ್ಷಣ ಸಚಿವರು ಬಂದಿದ್ದಾರೆ.

ಒತ್ತಡದಿಂದ ಕೂಡಿದ ಈಗಿನ ಸನ್ನಿ ವೇಶದಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯು ವಂತೆ ಬಲವಂತ ಮಾಡುವುದು ಸರಿಯಲ್ಲ. ಒಂದು ವೇಳೆ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಇಚ್ಛಿಸಿದಲ್ಲಿ ಕೇಂದ್ರದ ಮಾದರಿ ಯಲ್ಲೇ ಅವಕಾಶ ಮಾಡಿಕೊಡೋಣ.

ರಾಜ್ಯದಲ್ಲಿ ಸೋಂಕಿನ ಪ್ರಮಾಣ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದ್ದರೂ, ಗ್ರಾಮೀಣ ಭಾಗದಲ್ಲಿ ಸೋಂಕು ಜನರ ಜೀವನ್ನು ಹಿಂಡುತ್ತಿದೆ. ಇದರಿಂದ ವಿದ್ಯಾರ್ಥಿ ಗಳು ಪೋಷಕರು ಆತಂಕಕ್ಕೆ ಒಳಗಾಗಿದ್ದಾರೆ.

ಜೊತೆಗೆ ಮೂರನೇ ಅಲೆಯ ಬಗ್ಗೆಯೂ ಎಚ್ಚರ ವಹಿಸಬೇಕೆಂದು ತಜ್ಞರು ಸರ್ಕಾರಕ್ಕೆ ಸಲಹೆ ಮಾಡಿದ್ದಾರೆ. ಇಂತಹ ಸನ್ನಿವೇಶದಲ್ಲಿ ನಾವು ದುಡುಕುವುದು ಬೇಡ ಎಂಬ ತೀರ್ಮಾನಕ್ಕೆ ಬಂದಿದ್ದಾರೆ.

ಸೋಂಕಿನ ಹಿನ್ನೆಲೆಯಲ್ಲಿ ಇದೇ 24 ರಿಂದ ಆರಂಭವಾಗಬೇಕಿದ್ದ ದ್ವಿತೀಯ ಪಿಯುಸಿ ಪರೀಕ್ಷೆಗಳನ್ನು ಈಗಾಗಲೇ ಮುಂ ದೂಡಲಾಗಿದೆ. ಎಸ್ಸೆಸ್ಸೆಲ್ಸಿ ಪರೀಕ್ಷೆಗ ಳನ್ನು ಜುಲೈ ತಿಂಗಳಲ್ಲಿ ನಡೆಸಬೇಕೆಂಬ ತೀರ್ಮಾನ ಕೈಗೊಳ್ಳಲಾಗಿತ್ತು. ಆದರೆ, ಜೂನ್ ಅಂತ್ಯದ ವರೆಗೂ ಸೋಂಕು ಇದೇ ಪರಿಸ್ಥಿತಿಯಲ್ಲಿರುತ್ತದೆ. ಅಲ್ಲದೆ ಲಾಕ್‌ಡೌನ್ ಇಲ್ಲವೇ ಬಿಗಿ ನಿಲುವು ಮುಂದುವರೆಯು ತ್ತದೆ. ಇದರಿಂದ ವಿದ್ಯಾರ್ಥಿ ಗಳ ಮೇಲೆ ಮಾನಸಿಕ ಒತ್ತಡ ಬೀಳುತ್ತದೆ.

ಮುಖ್ಯಮಂತ್ರಿ ಅವರ ಜೊತೆ ಸಮಾಲೋಚನೆ ನಡೆಸಿ, ಅಧಿಕೃತ ಘೋಷಣೆ ಮಾಡುವ ಬಗ್ಗೆ ತೀರ್ಮಾನಕ್ಕೆ ಸಚಿವರು ಬಂದಿದ್ದಾರೆ.

ಒಂದು ವೇಳೆ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಸಂಪೂರ್ಣವಾಗಿ ರದ್ದು ಮಾಡಿದರೆ, ಇದೇ ಮೊದಲಾಗುತ್ತದೆ. ಕಳೆದ ವರ್ಷ ಕೋವಿಡ್ ಹರಡುವಿಕೆ ತಡೆಗೆ ಲಾಕ್‌ಡೌನ್ ಅವಧಿ ಮುಗಿದ ನಂತರ ಬಹಳ ಮುನ್ನೆಚ್ಚರಿಕೆ ಕ್ರಮ ಕೈಗೊಂಡು ಎಸ್ಸೆ ಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆ ಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿತ್ತು. ಅದೇ ಮಾದರಿಯಲ್ಲಿ ಈ ಬಾರಿ ಪರೀಕ್ಷೆ ನಡೆಸಲು ಸರ್ಕಾರ ತೀರ್ಮಾನ ಕೈಗೊಂಡಿತ್ತು. ಆದರೆ, ಪ್ರಧಾನಿಯವರ ನಿರ್ಧಾರದಿಂದ ಮತ್ತೆ ಅದೇ ದುಸ್ಸಾಹಸಕ್ಕೆ ಕೈ ಹಾಕದಿರಲು ನಿರ್ಧರಿಸಿದೆ.

ಕಳೆದ ವರ್ಷ ಒಂದ ರಿಂದ 9 ಹಾಗೂ 11ನೇ ತರಗತಿ ವೈದ್ಯಕೀಯ ಶಿಕ್ಷಣ ಹೊರತುಪಡಿಸಿ, ಎಲ್ಲಾ ತೆರನಾದ ಪದವಿ ಪರೀಕ್ಷೆಗಳನ್ನು ರದ್ದುಗೊಳಿಸಿ, ವಿದ್ಯಾರ್ಥಿಗಳಿಗೆ ಮುಂದಿನ ವರ್ಷಕ್ಕೆ ಭಡ್ತಿ ನೀಡಲಾಗಿತ್ತು. ಆದರೆ, ಅಂತಿಮ ವರ್ಷದ ಸೆಮಿಸ್ಟರ್ ಹಾಗೂ ವಾರ್ಷಿಕ ಪರೀಕ್ಷೆಗಳನ್ನು ಮಾತ್ರ ನಡೆಸಿ ಫಲಿತಾಂಶ ಪ್ರಕಟಿಸಿತ್ತು.

## ಮಿಲಿಟರಿ ಕಾಲೇಜಿಗೆ ಪ್ರವೇಶಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಜೂ.2- ರಾಷ್ಟ್ರೀಯ ಇಂಡಿಯನ್ ಮಿಲಿಟರಿ ಕಾಲೇಜಿಗೆ ಪ್ರವೇಶ ಪಡೆಯಬಯಸುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುವ ಅವಧಿಯನ್ನು ಇದೇ ದಿನಾಂಕ 10 ರವರೆಗೆ ವಿಸ್ತರಿಸಲಾಗಿದೆ. ವಿವರಕ್ಕೆ ಬೆಂಗಳೂರು ನಿರ್ದೇಶನಾಲಯದ ದೂರವಾಣಿ ಸಂಖ್ಯೆ: 080-25589459 ಕ್ಕೆ ಸಂಪರ್ಕಿಸಬಹುದೆಂದು ಶಿವಮೊಗ್ಗದ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

## ಸೋಂಕು ಇಳಿಮುಖವೆಂದು ಮೈಮರೆಯಬೇಡಿ

### ಹರಿಹರ ಶಾಸಕ ಎಸ್. ರಾಮಪ್ಪ ಮನವಿ

ಮಲೇಬೆನ್ನೂರು, ಜೂ.2- ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರಕ್ಕೆ ಇಂದು ದಿಢೀರ್ ಭೇಟಿ ನೀಡಿದ ಶಾಸಕ ಎಸ್. ರಾಮಪ್ಪ ಅವರು ಕೋವಿಡ್ ಲಸಿಕೆ ಕೇಂದ್ರಕ್ಕೆ ತೆರಳಿ, ಇದುವರೆಗೆ ಲಸಿಕೆ ಹಾಕಿರುವ ಕುರಿತು ಮಾಹಿತಿ ಕೇಳಿದರು.



ಲಸಿಕೆ ಹಾಕಿಸಿಕೊಳ್ಳಲು ಬರುವ ವರನ್ನು ಕಾಯಿಸಬೇಡಿ ಮತ್ತು ಲಸಿಕೆ ಇಲ್ಲವೆಂದು ವಾಪಸ್ ಕಳುಹಿಸಬೇಡಿ. ನಿಮಗೆ ಬೇಕಾಗಿರುವಷ್ಟು ಲಸಿಕೆ ನೀಡದಿದ್ದರೆ ನನಗೆ ತಿಳಿಸಿ ಎಂದು ರಾಮಪ್ಪ ವೈದ್ಯಾಧಿಕಾರಿ ಡಾ. ಲಕ್ಷ್ಮಿ ದೇವಿ ಅವರಿಗೆ ತಿಳಿಸಿದರು.

ಈಗ ಕಳುಹಿಸುತ್ತಿರುವ ಲಸಿಕೆಯ ಜೊತೆಗೆ ಪ್ರತಿನಿತ್ಯ ಇನ್ನೂ 100 ಜನರಿಗೆ ಲಸಿಕೆಯ ಬೇಡಿಕೆ ಇದೆ. ಆಸ್ಪತ್ರೆಗೆ ಈಗಾಗಲೇ 10 ಕಾನ್ಸಂಟ್ರೇಟರ್‌ಗಳು ಬಂದಿದ್ದು, ಆಕ್ಸಿಜನ್ ಅವಶ್ಯಕತೆ ಇರುವ ರೋಗಿಗಳಿಗೆ ಬಳಸುತ್ತಿದ್ದೇವೆ. ಆದರೆ, ಈ ಆಸ್ಪತ್ರೆಯಲ್ಲಿ ಸೋಂಕಿತರನ್ನು ದಾಖಲು ಮಾಡಿಕೊಂಡು ಚಿಕಿತ್ಸೆ ನೀಡಿದರೆ ಇತರೆ ರೋಗಿಗಳಿಗೆ ತೊಂದರೆ ಆಗುತ್ತದೆ. ಹಾಗಾಗಿ ಇಲ್ಲಿ ಸೋಂಕಿತರ ಚಿಕಿತ್ಸಾ ಕೇಂದ್ರ ಆರಂಭಿಸಬೇಡಿ ಎಂದು ಲಕ್ಷ್ಮಿದೇವಿ ಅವರು ಶಾಸಕರಿಗೆ ಮನವರಿಕೆ ಮಾಡಿ ಕೊಟ್ಟರು.

ಕೊಮಾರನಹಳ್ಳಿಯಲ್ಲಿರುವ ಯಾತ್ರಿ ನಿವಾಸ ಕಟ್ಟಡದಲ್ಲಿ ಸಿಸಿ ಸೆಂಟರ್ ಮಾಡಿದರೆ, ಈ ಭಾಗದ ಸೋಂಕಿತರಿಗೆ ಅನುವಾಗುತ್ತದೆ ಎಂದು ಆರೋಗ್ಯ ರಕ್ಷಾ ಸಮಿತಿ ಸದಸ್ಯ ಬಿ. ಮಂಜುನಾಥ್ ಮನವಿ ಮಾಡಿದಾಗ, ಶಾಸಕರು ಸಮ್ಮತಿ ಸೂಚಿಸಿ, ತಹಶೀಲ್ದಾರ್ ಅವರಿಗೆ ಸ್ಥಳ ಪರಿಶೀಲನೆ ಮಾಡಲು ಹೇಳುತ್ತೇನೆ ಎಂದರು.

ಸೋಂಕು ಇಳಿಮುಖವಾಗಿ ರುವುದು ಸಮಾಧಾನ ತಂದಿದೆ. ಆದರೆ, ಜನರು ಮೈಮರೆಯದೇ ಹೊಸ ಕೇಸ್ ಸೃಷ್ಟಿ ಆಗದಂತೆ ನಾವೆಲ್ಲರೂ ಮುನ್ನೆಚ್ಚರಿಕೆ ವಹಿ ಸೋಣ ಎಂದು ಶಾಸಕರು ತಾಲ್ಲೂಕಿನ ಜನರಲ್ಲಿ ಮನವಿ ಮಾಡಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ, ಡಾ. ನಿಸಾರ್, ಪಿ.ಆರ್. ಕುಮಾರ್, ಯೂನೂಸ್, ಶಾಸಕರ ಆಪ್ತ ಸಹಾಯಕ ಮಳಲಹಳ್ಳಿ ಹನುಮಂತಪ್ಪ ಇನ್ನಿತರರು ಹಾಜರಿದ್ದರು.

## ಕೊರೊನಾ ; ಮೃತಪಟ್ಟವರ ಬೆಲೆ ಬಾಳುವ ವಸ್ತುಗಳ ಕಳ್ಳತನ : ಆರೋಪ

ದಾವಣಗೆರೆ, ಜೂ.2- ಕೊರೊನಾದಿಂದ ಮೃತಪಟ್ಟವರ ಮೈ ಮೇಲಿನ ಬೆಲೆ ಬಾಳುವ ವಸ್ತುಗಳು ಕಳ್ಳತನವಾಗಿರುವ ಆರೋಪ ಕೇಳಿ ಬಂದಿದೆ.

ಕಳೆದ 10 ದಿನಗಳ ಹಿಂದೆ ಮೃತಪಟ್ಟಿದ್ದ ಸರ್ಕಾರಿ ವೈದ್ಯರ ಸಂಬಂಧಿಕರೊಬ್ಬರಿಗೆ ಸೇರಿದ ಬೆಲೆ ಬಾಳುವ ವಸ್ತುಗಳು ಕಾಣೆಯಾಗಿವೆ. ಮೃತರ ಪಾರ್ಥಿವ ಶರೀರದ ಅಂತ್ಯ ಸಂಸ್ಕಾರ ನಡೆಸುವ ಸಂದರ್ಭದಲ್ಲಿ ಇದು ಕುಟುಂಬದವರ ಗಮನಕ್ಕೆ ಬಂದಿದೆ. ಸೋಂಕಿತ ಮೃತರ ಬಂಗಾರದ ತಾಳಿ, ಕಿವಿಯೋಲೆ ಕಣ್ಮರೆಯಾಗಿದ್ದು, ಇದನ್ನು ತಮ್ಮ ಸಂಬಂಧಿಕರಾದ ಆಸ್ಪತ್ರೆಯ ವೈದ್ಯರ ಗಮನಕ್ಕೆ ತಂದಿದ್ದಾರೆ. ವೈದ್ಯರು ಆಸ್ಪತ್ರೆ ಸಿಬ್ಬಂದಿಗಳಿಗೆ ತರಾಟೆಗೆ ತೆಗೆದುಕೊಂಡಾಗ ಬಂಗಾರದ ಮಾಂಗಲ್ಯ ಸರವನ್ನು ಮರಳಿಸಿ ತಪ್ಪೊಪ್ಪಿಕೊಂಡಿದ್ದಾರೆ. ಆದರೆ ಕಿವಿಯೋಲೆ ಮಾತ್ರ ಇನ್ನೂ ಸಿಕ್ಕಿಲ್ಲ ಎನ್ನಲಾಗಿದೆ.

ಜಿಲ್ಲಾಸ್ಪತ್ರೆಯ ಓರ್ವ ವೈದ್ಯರ ಸಂಬಂಧಿಕರ ಆಭರಣವನ್ನೇ ಕದಿಯುವ ದುರುಳರು ಸಾಮಾನ್ಯ ಜನರ ವಸ್ತುಗಳನ್ನು ಬಿಡುವರೇ? ಎಂಬುದು ಯಕ್ಷ ಪ್ರಶ್ನೆ. ಇದೇ ರೀತಿ ಅನೇಕ ಪ್ರಕರಣಗಳು ನಡೆದಿದ್ದರೂ ಮೃತರ ಅಂತ್ಯಕ್ರಿಯೆ ನಡೆಸುವ ಭರದಲ್ಲಿ ಕುಟುಂಬದವರು ಅದನ್ನೆಲ್ಲಾ ಗಮನಿಸುತ್ತಿಲ್ಲ. ಸಂಬಂಧಪಟ್ಟವರು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂಬುದು ಜನರ ಒತ್ತಾಯವಾಗಿದೆ.

## ಅನ್ನ ದಾಸೋಹಕ್ಕೆ ಜ್ಯುವೆಲರ್ಸ್ ಅಸೋಸಿಯೇಷನ್ ಧನ ಸಹಾಯ

ದಾವಣಗೆರೆ, ಜೂ.2- ಕೊರೊನಾ ಹಿನ್ನೆಲೆಯಲ್ಲಿ ಆಗಿರುವ ಲಾಕ್‌ಡೌನ್ ಪರಿ ಣಾಮ ಸಂಕಷ್ಟಕ್ಕೀಡಾಗಿರುವ ರೋಗಿಗಳು, ಬಡವರು, ನಿರ್ಗತಿಕರಿಗೆ ಅನ್ನ ದಾಸೋಹ ನಡೆಸಲು ನಗರದ ಜ್ಯುವೆಲರ್ಸ್ ಅಸೋ ಷಿಯೇಷನ್ ಧನ ಸಹಾಯ ಮಾಡಿದೆ.

ಅನ್ನ ದಾಸೋಹ ನಡೆಸುತ್ತಿರುವ ತರಳ ಬಾಳು ಸೇವಾ ಸಮಿತಿ - ಶಿವಸೈನ್ಯ ಯುವಕರ ಸಂಘಕ್ಕೆ 10 ಸಾವಿರ ರೂ., ಸ್ಫೂರ್ತಿ ಸೇವಾ ಟ್ರಸ್ಟ್‌ಗೆ 10 ಸಾವಿರ ರೂ., ಮತ್ತು ಆವರಗೆರೆ ಜೈನ ಸಮಾಜದ ಗೋ ಶಾಲೆಗೆ ಎರಡು ಲೋಡ್ ಹುಲ್ಲು ನೀಡಲಾಗಿದೆ ಎಂದು ಅಸೋಸಿಯೇಷನ್‌ನ ಗೌರವಾಧ್ಯಕ್ಷ ಶಂಕರ್ ಎನ್.ವಿಠ್ಠಲ್‌ಕರ್ ತಿಳಿಸಿದ್ದಾರೆ.

## ಕೊರೊನಾ ಮತ್ತು ಬ್ಲ್ಯಾಕ್ ಫಂಗಸ್ ಭೀತಿ

(2ನೇ ಪುಟದಿಂದ) ಒಳಗಾದರು.

**ರೋಗ ಲಕ್ಷಣಗಳು :** ಈ ಬ್ಲ್ಯಾಕ್ ಫಂಗಸ್ ಹಂತ ಹಂತವಾಗಿ ಬೆಳೆಯುತ್ತದೆ. ಮೊದಲ ಮೂರು ಹಂತದಲ್ಲಿ ಸೋಂಕು ಮೂಗು, ಸೈನಸ್ ಮತ್ತು ಕಣ್ಣಿನ ಹೊರ ವಲಯಕ್ಕೆ ಸೀಮಿತವಾಗಿರುತ್ತದೆ. ನಾಲ್ಕನೇ ಮತ್ತು ಐದನೇ ಹಂತದಲ್ಲಿ ಕಣ್ಣಿನ ಸೋಂಕು ಪೂರ್ಣ ಪ್ರಮಾಣದಲ್ಲಿ ಆವರಿಸಿಕೊಂಡು ಮೆದುಳಿಗೆ ಹರಡುತ್ತದೆ.

**ಈ ರೋಗಿಗಳಲ್ಲಿ ಕಾಣಿಸಿಕೊಳ್ಳುವ ರೋಗ ಲಕ್ಷಣಗಳೆಂದರೆ :** ಮೂಗು ಕಟ್ಟಿಕೊಳ್ಳುವುದು, ಮೂಗಿನ ರಕ್ತಸ್ರಾವ, ಮೂಗಿನ ಭಾಗದಲ್ಲಿ ಕೀವು, ಕಣ್ಣಿನ ಭಾಗದಲ್ಲಿ ವಿಪರೀತ ನೋವು, ಕಣ್ಣು ಒಮ್ಮೆಲೇ ಊದಿಕೊಳ್ಳುವುದು, ಕಣ್ಣಿನ ರೆಪ್ಪೆ ಕೆಳಗೆ ಬಂದು ಜೋಲಾಡುವುದು, ಕಣ್ಣು ಮಂಜಾಗುವುದು ಇತ್ಯಾದಿ.

ಈಗಾಗಲೇ ಮೇಲೆ ತಿಳಿಸಿದಂತೆ ಸೋಂಕು ವ್ಯಕ್ತಿಯ ಮೆದುಳಿಗೆ ಹರಡಿ ಮರಣ ಬರದಿರಲು ವೈದ್ಯರು ವ್ಯಕ್ತಿಯ ಕಣ್ಣು ಗುಡ್ಡೆಯನ್ನು ಮತ್ತು ಸುತ್ತಲಿನ ಪದರಗಳನ್ನು ಶಸ್ತ್ರಚಿಕಿತ್ಸೆ ಮಾಡಿ ತೆಗೆಯಬೇಕಾಗುತ್ತದೆ.

ಕೆಲವರಲ್ಲಿ ಮೂಗಿನ ಸುತ್ತಲಿನ ಚರ್ಮದಲ್ಲಿ ಕಪ್ಪು ಬಣ್ಣದ ಚರ್ಮದ ಕಲೆ ಕಾಣಿಸಿಕೊಳ್ಳುತ್ತದೆ. ಹೆಚ್ಚಿನ ಈ ರೀತಿಯ ರೋಗಿಗಳು ವೈದ್ಯರಲ್ಲಿ ಬರುವುದು ಅಂತಿಮ ಹಂತದಲ್ಲಿ. ಈ ಕಾಯಿಲೆಯನ್ನು ಆರಂಭದ ಹಂತದಲ್ಲೇ ಮೂಗಿನ ತಪಾಸಣೆ ಮಾಡುವುದರಿಂದ ತಡೆಗಟ್ಟಬಹುದು. ಮೂಗಿನ ತಜ್ಞರು ಎಂಡೋಸ್ಕೋಪಿ ಮೂಲಕ ಪತ್ತೆ ಹಚ್ಚುತ್ತಾರೆ. ಈ ಹಂತದಲ್ಲಿ ಫಂಗಸ್ ವಿರುದ್ಧದ ಔಷಧವನ್ನು ಇಂಜೆಕ್ಷನ್ ರೂಪದಲ್ಲಿ ಪ್ರತಿದಿನ ಒಂದರಂತೆ 6 ರಿಂದ 8 ವಾರಗಳವರೆಗೆ ಕೊಡಬೇಕಾಗುತ್ತದೆ. ಈ ಇಂಜೆಕ್ಷನ್ ಕಿಡ್ನಿ ಸಮಸ್ಯೆಯಿರುವವರಿಗೆ ತೊಂದರೆ ಉಂಟು ಮಾಡುತ್ತದೆ. ಇದರ ಬೆಲೆ 3500 ರಿಂದ 4000 ರೂ.ಗಳವರೆಗೆ ಇರುತ್ತದೆ.

ಈ ಸೋಂಕು ಬರದಂತೆ ತಡೆಯುವ ಮುನ್ನೆಚ್ಚರಿಕಾ ಕ್ರಮ ಎಂದರೆ ಕೋವಿಡ್ ಕಾಯಿಲೆಗೆ ಚಿಕಿತ್ಸೆ ಕೊಡುವಾಗ ಮತ್ತು ಅನಂತರ ಸ್ಟಿರಾಯ್ಡ್ ಔಷಧವನ್ನು ತುಂಬಾ ಸರಿಯಾದ ಪ್ರಮಾಣ ಮತ್ತು ಸರಿಯಾದ ಅವಧಿಯವರೆಗೆ ಉಪಯೋಗಿಸುವುದು ಸೂಕ್ತ. ಮೊದಲನೇ ಕೋವಿಡ್ ಅಲೆಯಲ್ಲಿ ಈ ತರಹದ ಸಮಸ್ಯೆ ಡಯಾಬಿಟಿಸ್ ಇರುವವರಲ್ಲಿಯೂ ಸಹ ಕಂಡು ಬಂದಿರಲಿಲ್ಲ. ವೈದ್ಯರುಗಳ ಸಲಹೆಯಂತೆ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗುವಾಗ ರಕ್ತದ ಸಕ್ಕರೆ ಅಂಶವನ್ನು ಪರೀಕ್ಷಿಸುವುದು ಬಹಳ ಮುಖ್ಯ. ಹಾಗೆಯೇ ಅದನ್ನು ಸೂಕ್ತವಾಗಿ ಮಾನಿಟರ್ ಮಾಡಬೇಕು.

ಈ ಬ್ಲ್ಯಾಕ್ ಫಂಗಸ್‌ಗೆ ಪ್ರಮುಖವಾದ ಚಿಕಿತ್ಸೆಯ ವಿಧಾನಗಳೆಂದರೆ ಮೊದಲನೇ ಹಂತದಲ್ಲಿ ಆಂಟಿ ಫಂಗಲ್ ಇಂಜೆಕ್ಷನ್ ಕೊಡಲಾಗುತ್ತದೆ. ಈ ಇಂಜೆಕ್ಷನ್‌ಗಳು ರಕ್ತನಾಳಕ್ಕೆ ಕಣ್ಣಿನ ಸುತ್ತಲಿನ ಭಾಗಕ್ಕೆ ಮತ್ತು ಸೈನಸ್‌ಗಳ ಒಳಗಡೆ ಕೊಡಬಹುದು. ಪ್ರಮುಖವಾದ ಆಂಟಿ ಫಂಗಲ್ ಇಂಜೆಕ್ಷನ್ ಗಳೆಂದರೆ ಅಂಪೋಟೆರಿಸಿನ್ ಬಿ, ಪೋಸೋಕೋನಜೋಲ್ ಮತ್ತು ಐಸಾವುಕೋನಜೋಲ್. ಆರಂಭದಲ್ಲಿಯೇ ಚಿಕಿತ್ಸೆ ಆರಂಭಿಸಿದರೆ ಪರಿಣಾಮ ಉತ್ತೇಜನಕಾರಿಯಾಗಿರುತ್ತದೆ.

## ತೈಲ, ಅಗತ್ಯ ವಸ್ತುಗಳ ಬೆಲೆ ಏರಿಕೆಗೆ ಕರುನಾಡು ಖಂಡನೆ

ದಾವಣಗೆರೆ, ಜೂ.2- ಪ್ರತಿ ದಿನ ತೈಲ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನಸಾಮಾನ್ಯರ ಬದುಕು ಚಿಂತಾಜನಕ ವಾಗಿದೆ ಎಂದು ಕರುನಾಡ ರಕ್ಷಣಾ ವೇದಿಕೆ ಅಧ್ಯಕ್ಷ ಕೆ.ಟಿ. ಪ್ರಕಾಶ್ ಖಂಡಿಸಿದ್ದಾರೆ.

ದೇಶದಲ್ಲಿ ಕೊರೊನಾ ಮಹಾಮಾರಿ ಯಿಂದ ಕಳೆದ ಒಂದು ವರ್ಷದಿಂದ ಜನರು ತೀವ್ರ ಸಂಕಷ್ಟಕ್ಕೆ ಸಿಲುಕಿ ಜೀವನ ನಿರ್ವಹಣೆ ಕಷ್ಟಕರವಾಗಿದೆ. ಸರ್ಕಾರಕ್ಕೆ ಹಾಗೂ ಜನಪ್ರತಿನಿಧಿಗಳಿಗೆ ಹಿಡಿಶಾಪ ಹಾಕುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸಂಕಷ್ಟದಲ್ಲಿರುವ ಜನರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತೈಲದ ಮೇಲೆ ಹಾಕಿರುವ ತೆರಿಗೆಯನ್ನು ಕಡಿಮೆ ಮಾಡಬೇಕು. ಬಿಪಿಎಲ್, ಅಂತ್ಯೋದಯ ಮತ್ತು ಎಪಿಎಲ್ ಕಾರ್ಡುದಾರರಿಗೆ 10 ಸಾವಿರ ರೂ. ನೆರವನ್ನು ನೀಡಬೇಕೆಂದು ಆಗ್ರಹಿಸಿದ್ದಾರೆ.


**ಶ್ರೀ ಡಿ.ಕೆ. ಸಂಗಮೇಶ್ ಎಲಿಗಾರ್**
**ಪತ್ರ ಬರಹಗಾರರು, ದಾವಣಗೆರೆ ಸಿಟಿ ಇವರ ಮನವಿ**



ನನ್ನ ತಂದೆ ಲೇಟ್ ಕೆ.ಎಸ್. ದೊಡ್ಡಬಸಪ್ಪ ಎಲಿಗಾರ್, ಪತ್ರ ಬರಹಗಾರರು ಮತ್ತು ಶ್ರೀ ಡಿ.ಕೆ. ಸಂಗಮೇಶ್ ಎಲಿಗಾರ್ ಪತ್ರ ಬರಹಗಾರರು ಆದ ನಮ್ಮಲ್ಲಿ ಕೆಲವು ಮೂಲ ಕ್ರಯ ಪತ್ರಗಳು, ದಾನ ಪತ್ರಗಳು, ರಿಲೀಜ್ ಪತ್ರಗಳು, ಪಾಲು ವಿಭಾಗ ಪತ್ರಗಳು, ಜನರಲ್ ಪವರ್ ಆಫ್ ಅಟಾರ್ನಿ ಪತ್ರಗಳು, ಕ್ರಯದ ಕರಾರು ಪತ್ರಗಳು, ರದ್ಧತಿ ಪತ್ರಗಳು, ಬಿಲ್ ಪತ್ರಗಳು ಮತ್ತು ರದ್ಧತಿ ಪತ್ರಗಳು, ಡಿಪಾಜಿಟ್ ಆಫ್ ಟೈಟಲ್ ಡೀಡ್, ಹಣ ಸಂದಾಯ ರಶೀದಿಗಳು ಹಾಗೂ ದಾವಣಗೆರೆ ನಗರಸಭೆಯಿಂದ ಸುಮಾರು ವರ್ಷಗಳ ಹಿಂದೆ ಮಂಜೂರಾಗಿರುವ ನಿವೇಶನಗಳ ಬಗ್ಗೆ ನೀಡಿ ನೋಂದಣಿಯಾಗಿರುವ ಸೇಲ್ ಸರ್ಟಿಫಿಕೇಟ್ ಪತ್ರಗಳು ಮತ್ತು ಶಿರಮಗೊಂಡನಹಳ್ಳಿ ಗ್ರಾಮ ಪಂಚಾಯ್ತಿ, ಶ್ಯಾಬನೂರು ಗ್ರಾಮ ಪಂಚಾಯ್ತಿಗಳಿಂದ ನೀಡಿ, ನೋಂದಣಿಯಾಗಿರುವ ಸೇಲ್ ಸರ್ಟಿಫಿಕೇಟ್‌ಗಳು ನನ್ನಲ್ಲಿಯೇ ಇದುವರೆಗೂ ಸುಮಾರು ಪತ್ರಗಳು ಉಳಿದಿರುತ್ತವೆ. ಇದಕ್ಕೆ ಸಂಬಂಧಪಟ್ಟಂತೆ ಉಳಿದಿರುವ ಪತ್ರಗಳ ಬಗ್ಗೆ ಕೆಲವರು ಬಾಕಿ ಹಣ ಪಾವತಿ ಮಾಡಿರುತ್ತಾರೆ ಹಾಗೂ ಕೆಲವರು ಬಾಕಿ ಹಣವನ್ನು ಪಾವತಿ ಮಾಡಬೇಕಾಗಿರುತ್ತದೆ. ಆದುದರಿಂದ ಸಂಬಂಧಪಟ್ಟ ಸ್ಥಿರಾಸ್ತಿಗಳ ಮಾಲೀಕರು, ವಾರಸುದಾರರುಗಳು ಆಸ್ತಿಗಳ ಸರಿಯಾದ ಮಾಹಿತಿ ಕೊಟ್ಟು, ಬಾಕಿ ಹಣ ಪಾವತಿ ಮಾಡಬೇಕಾಗಿರುವವರು ಪಾವತಿ ಮಾಡಿ ದಾಖಲೆಗಳನ್ನು ಪಡೆದುಕೊಳ್ಳತಕ್ಕದ್ದು ಮತ್ತು ಬಾಕಿ ಹಣ ಪಾವತಿ ಮಾಡಿರುವವರು ಸಹ ಬಂದು ದಾಖಲೆಗಳನ್ನು ಪಡೆದುಕೊಳ್ಳಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇವೆ.

**ಶ್ರೀ ಡಿ.ಕೆ. ಸಂಗಮೇಶ್ ಎಲಿಗಾರ್,** ಪತ್ರ ಬರಹಗಾರರು
'ಸಂಗಮ' ಮನೆ ನಂ. 4078ಜಿ, 10ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆ,
ದಾವಣಗೆರೆ, ಮೊಬೈಲ್ ನಂ. 98440-65710



**ಮಾನ್ಯ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

ಪಿ. ಅಂಡ್ ಎಸ್.ಸಿ.ನಂ. 20/2021

ಅರ್ಜಿದಾರರು : ಶ್ರೀಮತಿ ಎಸ್. ಸೌಭಾಗ್ಯಮ್ಮ ಕೋಂ ಬಸವರಾಜ, ವಯಸ್ಸು 48 ವರ್ಷ ಮನೆಗೆಲಸ ಬಿ ಕಲ್ಪನಹಳ್ಳಿ ಗ್ರಾಮ, ದಾವಣಗೆರೆ ಜಿಲ್ಲೆ ಮತ್ತು ತಾಲ್ಲೂಕು ವಿರುದ್ಧ
ಎದುರುದಾರರು : ಯಾರೂ ಇಲ್ಲಾ.

**ಭಾರತೀಯ ಉತ್ತರಾಧಿಕಾರಿ ಅಧಿನಿಯಮ ಕಲಂ 373 (1) (ಬಿ)ರ ಅಡಿಯಲ್ಲಿ ನೀಡಲಾದ ಸಾರ್ವಜನಿಕ ಪ್ರಕಟಣಾ ನೋಟೀಸ್**

ಶ್ರೀಯುತ ತಿಪ್ಪೇರುದ್ರಪ್ಪ ಬಿನ್ ಭದ್ರಪ್ಪ ವಾಸ ಜಗಳೂರು ಟೌನ್ ಪೋಸ್ಟ್ ಆಫೀಸ್ ರಸ್ತೆ, 2ನೇ ಕ್ರಾಸ್, ಜೆ.ಸಿ.ಆರ್ ಬಡಾವಣೆ ಜಗಳೂರು ಟೌನ್ ಇವರು ಷೆಡ್ಯೂಲ್ ಆಸ್ತಿಗೆ ಸಂಬಂಧಪಟ್ಟಂತೆ ನೋಂದಾಯಿತ ವಿಲ್ ದಿನಾಂಕ : 12.04.2019 ರಲ್ಲಿ ಉಪ ನೋಂದಣಾಧಿಕಾರಿಗಳು ಜಗಳೂರು ತಾಲ್ಲೂಕು ಇಲ್ಲಿ ನೋಂದಣಿಯಾಗಿರುವ ನೋಂದಾಯಿತ ವಿಲ್ ಯಾನೆ ಮರಣ ಶಾಸನ ಪತ್ರವನ್ನು ಮಾಡಿಸಿಟ್ಟಿದ್ದು ಇರುತ್ತದೆ. ನಂತರ ಸದರಿ ಶ್ರೀಯುತ ತಿಪ್ಪೇರುದ್ರಪ್ಪ ಬಿನ್ ಭದ್ರಪ್ಪ ಇವರು ದಿನಾಂಕ : 10.02.2020 ರಂದು ಮರಣ ಹೊಂದಿರುತ್ತಾರೆ.

ಕಾರಣ ಮೇಲ್ಕಂಡ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಪ್ರೊಬೇಟ್ ಆದೇಶ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಅರ್ಜಿದಾರರನ್ನು ಹೊರತುಪಡಿಸಿ ಶ್ರೀಯುತ ತಿಪ್ಪೇರುದ್ರಪ್ಪ ಬಿನ್ ಭದ್ರಪ್ಪರವರ ವಾರಸುದಾರರು ಯಾರಾದರೂ ಇದ್ದಲ್ಲಿ ಕಾರಣ ನಿಮ್ಮ ಹಾಜರಾತಿಗಾಗಿ ದಿನಾಂಕ : 03.07.2021 ರಂದು ಬೆಳಿಗ್ಗೆ 11.00 ಗಂಟೆಗೆ ನೀವು ಖುದ್ದಾಗಿ ಅಥವಾ ವಕೀಲರ ಮುಖಾಂತರವಾಗಲೀ ಪ್ರಕರಣದಲ್ಲಿ ಹಾಜರಿದ್ದು, ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಸದರಿ ಪ್ರಕರಣವನ್ನು ಏಕಪಕ್ಷಿಯವಾಗಿ ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಯಿರಿ.

ಷೆಡ್ಯೂಲ್ ನಂ.1 : ಜಗಳೂರು ತಾಲ್ಲೂಕು ಕಸಬಾ ಹೋಬಳಿ ಮೂಡಲಮಾಚಿಕೆರೆ ಗ್ರಾಮಕ್ಕೆ ಸೇರಿದ ರಿ.ಸ. ನಂಬರ್ 29/2 ಇದರ ನಿಕ್ಕಿ ವಿಸ್ತೀರ್ಣ 2-08 ಎ-ಗು (ಎಕರೆ ಎರಡು ಗುಂಟೆ ಎಂಟು) ಖರಾಬು 00.01 ಗುಂಟೆ ಆಕಾರ 1-32 ಪೈಸೆ ಇರುವ ಜಮೀನಿಗೆ ಚಕ್ಕುಬಂದಿ. ಪೂರ್ವಕ್ಕೆ : ಅಂಗಡಿ ಚಂದ್ರಪ್ಪ ಬಿನ್ ನಿಜಲಿಂಗಪ್ಪ ಇವರ ಜಮೀನು, ಪಶ್ಚಿಮಕ್ಕೆ : ಎಸ್. ಸೌಭಾಗ್ಯಮ್ಮ ಕೋಂ ಬಸವರಾಜ ಇವರ ಜಮೀನು, ಉತ್ತರ : ಪ್ರಕಾಶಪ್ಪ ಮತ್ತು ಮುಸ್ಟೂರಪ್ಪ ಬಿನ್ ನಿಂಗಪ್ಪ ಇವರ ಜಮೀನು, ದಕ್ಷಿಣಕ್ಕೆ : ನನ್ನ ಹೆಸರಿನಲ್ಲಿರುವ ನನ್ನ ಮಗ ವೀರಭದ್ರಪ್ಪನ ಪಾಲಿನ ಜಮೀನು. ಷೆಡ್ಯೂಲ್ ನಂ.2 : ಜಗಳೂರು ತಾಲ್ಲೂಕು ಕಸಬಾ ಹೋಬಳಿ ಮೂಡಲಮಾಚಿಕೆರೆ ಗ್ರಾಮಕ್ಕೆ ಸೇರಿದ ರಿ.ಸ. ನಂಬರ್ 63/2 ಇದರ ವಿಸ್ತೀರ್ಣ 00-04 ಎ-ಗು (ಎಕರೆ ಇಲ್ಲ ಗುಂಟೆ ನಾಲ್ಕು) ಆಕಾರ 00-05 ಪೈಸೆ ಇರುವ ಜಮೀನಿಗೆ ಚಕ್ಕುಬಂದಿ :

ಪೂರ್ವಕ್ಕೆ : ನಾಗಪ್ಪ ಬಿನ್ ಗಂಗಪ್ಪ ಇವರ ಕಣ, ಪಶ್ಚಿಮಕ್ಕೆ : ಉಪ್ಪಾರ ಚಂದ್ರಪ್ಪ ಬಿನ್ ಮುರುಡಪ್ಪ ಇವರ ಕಣ, ಉತ್ತರಕ್ಕೆ : ಅಂಗಡಿ ಚನ್ನಮ್ಮ ಕೋಂ ದ್ಯಾಮಪ್ಪ ಮತ್ತು ಅಂಗಡೇರ ರುದ್ರಪ್ಪ ಬಿನ್ ವೀರಣ್ಣ ಇವರುಗಳ ಕಣ, ದಕ್ಷಿಣಕ್ಕೆ : ನಾಗಪ್ಪ ಬಿನ್ ಗಂಗಪ್ಪ ಮತ್ತು ವೀರಣ್ಣ ಬಿನ್ ನಾಗಲಿಂಗಪ್ಪ ಇವರುಗಳ ಕಣ.

ಸಹಿ ಹಾಗೂ ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ : 02.06.2021 ರಂದು ನೀಡಲಾಗಿದೆ.

**ಸಹಿ/- ಅರ್ಜಿದಾರರ ಪರ ವಕೀಲರು**
**(ಡಿ.ವಿ. ನಾಗಪ್ಪ), (ಎಸ್.ಎಂ. ಅಜ್ಜಯ್ಯ)**
**ದಾವಣಗೆರೆ. ದಿನಾಂಕ : 02.06.2021**

**ನ್ಯಾಯಾಲಯದ ಆದೇಶದ ಮೇರೆಗೆ**
**ಸಹಿ/- ಮುಖ್ಯ ಆಡಳಿತಾಧಿಕಾರಿಗಳು, ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಾವಣಗೆರೆ.**


## ವಾರಕ್ಕೊಮ್ಮೆ ಭೇಟಿ, ಪಿಕ್‌ನಿಕ್ ಅಲ್ಲದೆ ಮತ್ತೇನು?

### ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಅವರಿಗೆ ಕಾಂಗ್ರೆಸ್ ಮುಖಂಡ ಡಿ.ಬಸವರಾಜ್ ಪ್ರಶ್ನೆ

ದಾವಣಗೆರೆ, ಜೂ.2 - ಜಿಲ್ಲೆಯಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದ್ದು, ಜಿಲ್ಲೆಯ ಜನ ಸಾಲು ಸಾಲಾಗಿ ಕೊರೊನಾ ಎಂಬ ಮಹಾಮಾರಿಗೆ ಬಲಿಯಾಗುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಜಿಲ್ಲೆಯಲ್ಲಿ ವಾಸ್ತವ್ಯ ಮಾಡಬೇಕಾಗಿದ್ದ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ವಾರಕ್ಕೊಮ್ಮೆ ಭೇಟಿ ನೀಡುತ್ತಿರುವುದು ಪಿಕ್‌ನಿಕ್ ಅಲ್ಲದೇ ಮತ್ತೇನು? ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ರಾಜ್ಯ ವಕ್ತಾರ ಡಿ. ಬಸವರಾಜ್ ಅವರು ಪ್ರಶ್ನಿಸಿದ್ದಾರೆ.

ಭೈರತಿ ಅವರು ಜಿಲ್ಲೆಯ ಅಭಿವೃದ್ಧಿ, ಆಡಳಿತದ ವಿಚಾರದಲ್ಲಿ ಇದುವರೆಗೂ ಗಂಭೀರವಾಗಿ ತೆಗೆದು ಕೊಂಡಿಲ್ಲ. ಸಿಎಂ ಯಡಿಯೂರಪ್ಪ ಅವರು ಉಸ್ತು ವಾರಿ ಸಚಿವರು ತಮ್ಮ ಉಸ್ತುವಾರಿ ಜಿಲ್ಲೆಗಳಲ್ಲಿ 15 ದಿನಗಳ ಕಾಲ ವಾಸ್ತವ್ಯ ಮಾಡಿ ಕೊರೊನಾ ಉಲ್ಬಣಿ ಸದಂತೆ ಎಚ್ಚರ ವಹಿಸಲು ಆದೇಶಿಸಿದ್ದರೂ ಸಹ ಸಿಎಂ ಮಾತಿಗೆ ಅವರ ಸಂಪುಟದ ಸದಸ್ಯರೇ ಕವಡೆ ಕಾಸಿನ ಕಿಮ್ಮತ್ತು ಕೊಡುತ್ತಿಲ್ಲ ಎಂದು ದೂರಿದ್ದಾರೆ.

ಕೋವಿಡ್‌ನಿಂದ ಬಡಜನರು ಜಿಲ್ಲೆಯಲ್ಲಿ ಬೆಡ್, ಆಕ್ಸಿಜನ್ ಬೆಡ್ ಮತ್ತು ವೆಂಟಿಲೇಟರ್ ಬೆಡ್‌ಗಾಗಿ ಕಣ್ಣೀರಿಡುತ್ತಿದ್ದಾರೆ. ಸೂಕ್ತ ಸಮಯದಲ್ಲಿ ಸೂಕ್ತ ವೈದ್ಯಕೀಯ ಚಿಕಿತ್ಸೆ ದೊರೆಯದೆ ನೂರಾರು ಜನರು ಸಾವಿನ ಮನೆ ಸೇರಿದ್ದಾರೆ. ಇಂತಹ ಸಂಕಷ್ಟ ಸಮಯದಲ್ಲಿ ಬಡ ಜನರ ಸಾವಿನ ಲೆಕ್ಕವನ್ನು ಸರಿಯಾಗಿ ನೀಡದೇ ಸುಳ್ಳು ಅಂಕಿ-ಅಂಶಗಳನ್ನು ಜಿಲ್ಲಾಡಳಿತ ಪ್ರಕಟಣೆ ಮಾಡುತ್ತಿದೆ.

ಕೋವಿಡ್ ಲಸಿಕೆ ಕೊರತೆ ಇದ್ದು, ಬೆಳಗಿನ ಜಾವ ಲಸಿಕಾ ಕೇಂದ್ರಗಳಿಗೆ ಹೋದರೂ ಸಹ ಲಸಿಕೆ ದೊರೆಯದೇ ಮನೆಗೆ ವಾಪಾಸ್ ಆಗುತ್ತಿದ್ದಾರೆ. ಇಂತಹ ಸತ್ಯ ಸಂಗತಿಗಳನ್ನು ಅರಿಯಬೇಕಾದರೆ ಸಚಿವರು ತಿಂಗಳಿಗೆ 15 ದಿನ ಜಿಲ್ಲೆಯಲ್ಲಿ ವಾಸ್ತವ್ಯ ಮಾಡಿದಾಗ ಸತ್ಯದ ದರ್ಶನವಾಗುತ್ತದೆ ಎಂದು ಬಸವರಾಜ್ ತಿಳಿಸಿದ್ದಾರೆ.

ಕಳೆದ 20 ವರ್ಷಗಳಲ್ಲಿ ನನ್ನಷ್ಟು ಯಾರು ಜಿಲ್ಲೆಯಲ್ಲಿ ಭೇಟಿ ಮಾಡಿಲ್ಲ. ಜಿಲ್ಲೆಯ ಅಭಿವೃದ್ಧಿಯನ್ನೂ ಸಹ ಮಾಡಿಲ್ಲ ಎಂದು ಭೈರತಿ ಬಸವರಾಜ್ ಅವರು ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುತ್ತಿದ್ದಾರೆ. ದಾವಣಗೆರೆ ಜಿಲ್ಲೆಯ ಇತಿಹಾಸ ಸಚಿವರಿಗೆ ತಿಳಿಯದು. ದಾವಣಗೆರೆಯ ನೈಜ ಅಭಿವೃದ್ಧಿ ಆಗಿದ್ದು, ಎಸ್.ಎಂ. ಕೃಷ್ಣ ಸರ್ಕಾರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಆಡಳಿತದ ಅವಧಿಯಲ್ಲಿ ಜಿಲ್ಲೆಯಲ್ಲಿ ಕುಂದುವಾಡ ಕೆರೆ, ಆಶ್ರಯ ಮನೆಗಳು, ನಗರದ ಅಷ್ಟ ದಿಕ್ಕುಗಳಲ್ಲಿ ಸಿಮೆಂಟ್ ರಸ್ತೆಗಳು, ಡಾಂಬರೀಕರಣ ಸೇರಿದಂತೆ ಅಭಿವೃದ್ಧಿ ಪರ್ವವೇ ನಡೆದಿತ್ತು. ನಂತರ ಸಿದ್ದರಾಮಯ್ಯನವರ ಸಂಪುಟದಲ್ಲಿ ಶಾಮನೂರು ಶಿವಶಂಕರಪ್ಪ ಮತ್ತು ಎಸ್.ಎಸ್. ಮಲ್ಲಿಕಾರ್ಜುನ್ ಜಿಲ್ಲಾ ಉಸ್ತುವಾರಿ ಮಂತ್ರಿಗಳಾಗಿ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗಾಗಿ, ಗಾಜಿನ ಮನೆ, ಮೇಲ್ಸೇತುವೆ ಸೇರಿದಂತೆ ಸಾವಿರಾರು ಕೋಟಿ ರೂ ಅನುದಾನ ತಂದು ನಗರ ಹಾಗೂ ಜಿಲ್ಲೆಯನ್ನು ಅಭಿವೃದ್ಧಿ ಪಡಿಸಿದ್ದಾರೆ ಎಂದು ಡಿಬಿ ಸಚಿವರಿಗೆ ತಿರುಗೇಟು ನೀಡಿದ್ದಾರೆ.

## ಹೊನ್ನಾಳಿ : ಧರ್ಮಸ್ಥಳ ಸಂಸ್ಥೆಯಿಂದ 2 ಆಮ್ಲಜನಕ ಸಾಂದ್ರಕಗಳ ಸಲ್ಲಿಕೆ



ಹೊನ್ನಾಳಿ, ಜೂ.2- ತಾಲ್ಲೂಕಿನ ಸಾರ್ವಜನಿಕರ ಆಸ್ಪತ್ರೆಗೆ ಧರ್ಮಸ್ಥಳ ಸಂಸ್ಥೆ ವತಿಯಿಂದ ರೋಗಿಗಳ ಅನುಕೂಲಕ್ಕಾಗಿ 2 ಆಮ್ಲಜನಕ ಸಾಂದ್ರಕಗಳನ್ನು ಇಂದು ನೀಡಲಾಯಿತು. ಶಾಸಕ ಎಂ.ಪಿ. ರೇಣುಕಾಚಾರ್ಯ ಪುರಸಭೆ ಅಧ್ಯಕ್ಷ ಶ್ರೀಧರ್, ಧರ್ಮಸ್ಥಳ ಸಂಸ್ಥೆಯ ಜಿಲ್ಲಾ ನಿರ್ದೇಶಕ ಜಯಂತ್, ಹೊನ್ನಾಳಿ ಸಂಸ್ಥೆಯ ಯೋಜನಾಧಿಕಾರಿ ಬಸವರಾಜ್, ವಲಯ ಮೇಲ್ವಿಚಾರಕ ನಾಗರಾಜ್, ಆರೋಗ್ಯಾಧಿಕಾರಿ ಕೆಂಚಪ್ಪ, ಡಾ. ರಾಜಕುಮಾರ್, ಪಿಎಸ್‌ಐ ಬಸವನಗೌಡ, ಪಂಚಾಯಿತಿ ಸದಸ್ಯ ರಂಗನಾಥ ಹಾಗೂ ಮಹೇಶ್ ಉಡೇದ್, ಮಂಜು ಇಂಚರ್, ಕೋಳಿ ಸತೀಶ್ ಮತ್ತಿತರರು ಇದ್ದರು.



## ನಿದ್ದೆ ಕದ್ದ ಬುದ್ಧ...!

ಏನಣಾ ಒಂದು ನಾಲ್ಕೈದು ದಿನಾ ಆತು ಫೋನೇ ಮಾಡಿರಲಿಲ್ಲ?

**ಏನು ಮಾಡೋದು ತಮ್ಮಾ ಈಗ ರಾತ್ರಿಯಲ್ಲಾ ನಿದ್ದೆಗೆಡದೇ ಆಗೇತಿ. ವಿಚಾರ ಮಾಡೀ ಮಾಡೀ ತಲೆ ಕೆಟ್ಟು ಹೋಗೇತಿ.**

ಅದು ಯಾರಣ್ಣಾ ನಿದ್ದೆ ಕೆಡಿಸಿದವರು!?

**ಅದೇ ಆ ಗೌತಮ ಬುದ್ಧ!**

ಬುದ್ಧ ಭಗವಾನ! ಅವರು ನಿನ್ನ ನಿದ್ದೆ ಹೆಂಗೆ ಕೆಡಿಸಿದರು?

**ಬುದ್ಧ ಪೂರ್ಣಿಮಾ ದಿನ ನಾನು ಬುದ್ಧನನ್ನು ಪ್ರಾರ್ಥಿಸಿದೆ. ಅಪಾ ಪುಣ್ಯಾತ್ಮ ಹೆಂಗಾರ ಮಾಡಿ ಈ ಕೊರೊನಾ ಕತ್ತಲ ಕಳಿಯಪಾ ಎಂದು ಬೇಡಿಕೊಂಡೆ. ಅವತ್ತು ರಾತ್ರಿ ಆಸಾಮಿ ಕನಸನಲ್ಲಿ ಬಂದು ಬಿಡೋದಾ!**

ಹೌದಾ! ನಿನ್ನ ಕನಸಿನ್ಯಾಗೆ. ಬಂದು ಏನಂದರು?

**ನೋಡಪಾ. ಕೊರೊನಾ ಕತ್ತಲು ಕಳಿಯೋದು ನನ್ನ ಕೈಲಿಲ್ಲಾ. ನಿಮ್ಮ ಕೈಯಲ್ಲೇ ಇರೋದು ಅಂದಾ!**

ಅದೆಂಗೆ ನಮ್ಮ ಕೈಲಿ ಐತಂತೆ?

**ಅದೇ, ಫೋನ್ ಮಾಡಿದಾಗಲೆಲ್ಲಾ ಆ ಹೆಣ್ಣು ಮಗಳು ಒದರುಕೆಂತಳಲಾ...ಮಾಸ್ಕ್ ಹಾಕ್ಯಳ್ರೀ, ಸೋಪ್ ಹಚ್ಕೆಳ್ರೀ.. ಅಂತರ ಕಾಪಾಡ್ರೀ, ಗುಂಪು ಸೇರಬೇಡಿ ಅಂತಾ. ಇದನ್ನೇ ಅವನೂ ಹೇಳಿದಾ!**

ಅಯ್ಯೋ ಇದನ್ನ ಹೇಳೋಕೆ ಬುದ್ಧ ಬರಬೇಕೇನು?

**ನಾನೂ ಅದನ್ನೇ ಕೇಳಿದೆ. ಅದಕ್ಕವನು ನಾನು ಬಂದಿದ್ದು ಬೇರೆ ವಿಷಯ ಹೇಳೋಕೆ ಅಂದಾ!**




ಏನು ವಿಷಯಾ?

**ನೋಡಪಾ. ಎಲ್ಲರೂ ಸರಿಯಾದ ನಿಯಮವನ್ನು ಪಾಲಿಸಿದ ಮೇಲೆ, ಲಸಿಕೆ ಹಾಕಿಸಿಕೊಂಡ ಮೇಲೆ, ಕೊರೊನಾ ಕಾಟ ಕಡಿಮೆಯಾಗಿ ನಿಮ್ಮ ದುಡಿಮೆ ಚೆನ್ನಾಗಿ ಆಗುತ್ತೆ. ಆದರೆ, ನೀವು ಈ ಮುಖ್ಯವಾದ ವಿಷಯಕ್ಕೆ ಗಮನ ಕೊಡಬೇಕು.**

ಯಾವುದಕ್ಕೇ?

**ಅನಾದಿ ಕಾಲದಿಂದಾ ಇರುವ, ಕೊರೊನಾಕ್ಕಿಂತಾ ಭಯಂಕರ ವೈರಸ್ಸಿನ ಬಗ್ಗೆ. ಕೊರೊನಾ ಬರೀ ಮನುಷ್ಯನನ್ನ ಕೊಲ್ಲುತ್ತೆ. ಆದರೆ, ಈ ಮೂರೂ ವೈರಸ್ಸೂ ಮನುಷ್ಯತ್ವವನ್ನೇ ಕೊಲ್ಲುತ್ತವೆ ಎಂದ!**

ಅವು ಯಾವ ವೈರಸ್ ಅಂತಪಾ?

**ಒಂದು ಮತಾಂಧತೆ.**

ಇನ್ನೆರಡು?

**ಪ್ರತಿಷ್ಠೆ ಮತ್ತು ದ್ವೇಷ!!!**

# ರೈತರು ಅಧಿಕೃತ, ಗುಣಮಟ್ಟದ ಬಿತ್ತನೆ ಬೀಜಗಳನ್ನೇ ಬಿತ್ತಬೇಕು

ಜಗಳೂರು, ಜೂ.2- ತಾಲ್ಲೂಕಿನಲ್ಲಿ ಈ ವರ್ಷ ಉತ್ತಮವಾಗಿ ಮಳೆಯಾಗುತ್ತಿದ್ದು, ರೈತರಿಗೆ ಬಿತ್ತನೆ ಬೀಜ ಮತ್ತು ಗೊಬ್ಬರದ ಕೊರತೆಯಾಗದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ ಎಂದು ಶಾಸಕ ಎಸ್.ವಿ. ರಾಮಚಂದ್ರಪ್ಪ ತಿಳಿಸಿದರು.

ಪಟ್ಟಣದ ಎಪಿಎಂಸಿ ಆವರಣದಲ್ಲಿ ಇಂದು ಮುಂಗಾರು ಹಂಗಾಮಿನ ಬಿತ್ತನೆ ಬೀಜ ವಿತರಣಾ ಕೇಂದ್ರವನ್ನು ಉದ್ಘಾಟನೆ ಮಾಡಿ ಅವರು ಮಾತನಾಡಿದರು.

ರೈತರು ಕಳಪೆ ಗುಣಮಟ್ಟದ ಬಿತ್ತನೆ ಬೀಜಗಳನ್ನು ಬಿತ್ತನೆ ಮಾಡಬಾರದು. ಅಧಿಕೃತವಾದ ಮತ್ತು ಗುಣಮಟ್ಟದ ಬಿತ್ತನೆ ಬೀಜಗಳನ್ನು ಉಪಯೋಗಿಸಬೇಕು. ಬೀಜ ಮಾರಾಟಗಾರರು ಹಾಗೂ ಕಂಪನಿಯವರು ಕಳಪೆ ಬಿತ್ತನೆ ಬೀಜ ಮಾರಾಟ ಮಾಡಿದರೆ ಅಂತಹವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಶಾಸಕರು ಎಚ್ಚರಿಕೆ ನೀಡಿದರು.

ಸಾಕಷ್ಟು ಪ್ರಮಾಣದಲ್ಲಿ ಬೀಜ, ಗೊಬ್ಬರ ದಾಸ್ತಾನು ಮಾಡಲು ಕೃಷಿ ಇಲಾಖೆ ಕ್ರಮ ಕೈಗೊಂಡಿದ್ದು, ರೈತರು ಬಿತ್ತನೆ ಬೀಜ ಹಾಗೂ ಗೊಬ್ಬರ ದೊರಕುವ ಬಗ್ಗೆ ಆತಂಕ ಪಡುವ ಅವಶ್ಯಕತೆ ಇಲ್ಲ. ರೈತರು ಮುಖಕ್ಕೆ ಮಾಸ್ಕ್ ಧರಿಸಿ ಮತ್ತು ಸಾಮಾಜಿಕ ಅಂತರ ಕಾಪಾಡಿಕೊಂಡು ಬಿತ್ತನೆ ಬೀಜ ಮತ್ತು ಗೊಬ್ಬರವನ್ನು ಖರೀದಿ ಮಾಡಬೇಕು. ಅಧಿಕೃತವಾಗಿ ಕೃಷಿ ಇಲಾಖೆಯಿಂದ ವಿತರಣೆ ಮಾಡುವ ಬಿತ್ತನೆ ಬೀಜವನ್ನು ಉಪಯೋಗಿಸಬೇಕು. ರೈತರು ಕಡ್ಡಾಯವಾಗಿ ಅಕ್ಕಡಿ ಬೆಳೆಯಾಗಿ ಔಡಲ ಮತ್ತು ತೊಗರಿ ಬಿತ್ತನೆ ಮಾಡಬೇಕು. ಆಗ ಮಾತ್ರ ರೈತ ಸ್ವಾವಲಂಬಿಯಾಗಲು ಸಹಕಾರಿಯಾಗಲಿದೆ ಎಂದು ಶಾಸಕರು ತಿಳಿಸಿದರು.

ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಶ್ರೀನಿವಾಸಲು ಮಾತನಾಡಿ, ತಾಲ್ಲೂಕಿನಲ್ಲಿ ಪೂರ್ವ ಮುಂಗಾರಿನಲ್ಲಿ 95 ಮಿ.ಮೀ ಮಳೆಯಾಗಬೇಕಿತ್ತು. ಇದೀಗ 105 ಮಿ.ಮೀ. ಮಳೆಯಾಗಿದ್ದು, ಶೇ. 10 ರಷ್ಟು ಹೆಚ್ಚು ಮಳೆಯಾಗಿದೆ. ಒಟ್ಟು 54 ಸಾವಿರ ಹೆಕ್ಟೇರ್ ಪ್ರದೇಶದ ಕೃಷಿ ಜಮೀನಿನಲ್ಲಿ ಬಿತ್ತನೆಗೆ ಗುರಿ ಹೊಂದಲಾಗಿದೆ. ತಾಲ್ಲೂಕಿನ ವಿವಿಧೆಡೆ 10 ಖರೀದಿ ಕೇಂದ್ರಗಳನ್ನು ತೆರೆಯಲಾಗಿದ್ದು, ರೈತರು ಅಗತ್ಯ ದಾಖಲೆ ಸಲ್ಲಿಸಿ ಬೀಜ, ರಸಗೊಬ್ಬರ ಪಡೆಯಬಹುದು ಎಂದರು.

ಮೆಕ್ಕೆಜೋಳ 1375 ಕ್ವಿಂಟಾಲ್, ಹೈ. ಜೋಳ 50 ಕ್ವಿಂಟಾಲ್ , ತೊಗರಿ 160 ಕ್ವಿಂಟಾಲ್, ಸೂರ್ಯಕಾಂತಿ 30 ಕ್ವಿಂಟಾಲ್, ಶೇಂಗಾ 3000 ಕ್ವಿಂಟಾಲ್, ಸಜ್ಜೆ 50 ಕ್ವಿಂಟಾಲ್ ದಾಸ್ತಾನು ಮಾಡಲಾಗಿದೆ. ವಿವಿಧ ರಸಗೊಬ್ಬರ ಒಟ್ಟು 14,400 ಮೆಗಾ ಟನ್ ಬೇಡಿಕೆಯಿದ್ದು, ಡಿಎಪಿ 1200 ಮೆಗಾ ಟನ್, ಯೂರಿಯಾ 3250 ಮೆಗಾ ಟನ್, ಪೊಟ್ಯಾಷ್ 260, ವಿವಿಧ ಸಂಯುಕ್ತ ಗೊಬ್ಬರಗಳು 1800 ಮೆಗಾ ಟನ್,ಒಟ್ಟು 6510 ಮೆಗಾ ಟನ್ ಗೊಬ್ಬರ ದಾಸ್ತಾನಿಕರಿಸಲಾಗಿದೆ. ರಸಗೊಬ್ಬರ ಮತ್ತು ಬೀಜದ ಕೊರತೆಯಿಲ್ಲ ಎಂದು ಮಾಹಿತಿ ನೀಡಿದರು.

ಜಿಲ್ಲಾ ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್ ಮತ್ತು ಎಪಿಎಂಸಿ ಅಧ್ಯಕ್ಷ ರೇಣುಕಾನಂದ, ಉಪಾಧ್ಯಕ್ಷ ಗುರುಮೂರ್ತಿ, ಬಿಜೆಪಿ ಮಂಡಲ ಅಧ್ಯಕ್ಷ ಮಹೇಶ್, ಡಿಸಿಸಿ ಬ್ಯಾಂಕ್ ಅಧ್ಯಕ್ಷ ವೇಣು ಗೋಪಾಲ್ ರೆಡ್ಡಿ, ಪ.ಪಂ. ಅಧ್ಯಕ್ಷ ಆರ್. ತಿಪ್ಪೇಸ್ವಾಮಿ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.




**ಜಗಳೂರು : ಮುಂಗಾರು ಹಂಗಾಮಿನ ಬಿತ್ತನೆ ಬೀಜ ವಿತರಣಾ ಕೇಂದ್ರದ ಉದ್ಘಾಟನಾ ಸಮಾರಂಭದಲ್ಲಿ ಶಾಸಕ ಎಸ್. ವಿ. ರಾಮಚಂದ್ರಪ್ಪ ಕರೆ**

# ಮೆಕ್ಕೆಜೋಳದೊಂದಿಗೆ ಮಿಶ್ರ ಬೆಳೆ ಸೂಕ್ತ



ದಾವಣಗೆರೆ, ಜೂ.2- ರೈತರು ಪ್ರತಿ ವರ್ಷ ಮೆಕ್ಕೆಜೋಳ ಬೆಳೆಯುವ ಮೂಲಕ ಏಕ ಬೆಳೆ ಪದ್ಧತಿಯನ್ನೇ ಅನುಸರಿಸುತ್ತಿದ್ದು, ಇಲ್ಲಿಯವರೆಗೂ ಯಾವುದೇ ಬೆಳೆ ಪರಿವರ್ತನೆ ಮಾಡದೇ ಇರುವುದು ಸರಿಯಲ್ಲ. ಮೆಕ್ಕೆಜೋಳದೊಂದಿಗೆ ಮಿಶ್ರ ಬೆಳೆ ಅನುಸರಿಸುವುದು ಸೂಕ್ತ ಎಂದು ಎಂದು ಶಾಸಕ ಪ್ರೊ. ಲಿಂಗಣ್ಣ ತಿಳಿಸಿದರು.

ಮಾಯಕೊಂಡ ಹೋಬಳಿ ಹಿಂಡಸಘಟ್ಟ ಗ್ರಾಮದಲ್ಲಿ ಕೃಷಿ ಇಲಾಖೆ ವತಿಯಿಂದ ರಾಷ್ಟ್ರೀಯ ಆಹಾರ ಭದ್ರತಾ (ಎನ್‌ಎಫ್‌ಎಸ್‌ಎಂ) ಯೋಜನೆಯಡಿ ಇಂದು ಏರ್ಪಾಡಾಗಿದ್ದ ರೈತರಿಗೆ ಉಚಿತವಾಗಿ ತೊಗರಿ ಮಿನಿ ಕಿಟ್ ಅಥವಾ ಕಿರುಚೀಲ ವಿತರಿಸುವ ಕಾರ್ಯಕ್ರಮವನ್ನುದ್ದೇಶಿಸಿ ಅವರು ಮಾತನಾಡಿದರು.

ರೈತರು ಯಾವುದಾದರೂ ಅಂತರ ಬೆಳೆ ಬೆಳೆಯಲು ಅನುಕೂಲವಾಗುವಂತಹ ಕಾರ್ಯಕ್ರಮ ಹಮ್ಮಿಕೊಂಡು ರೈತರಿಗೆ ಸಹಾಯ ಮಾಡಬೇಕೆಂದು ಕೃಷಿ ಇಲಾಖೆಯವರಿಗೆ ಈಗಾಗಲೇ ಸೂಚನೆ ನೀಡಲಾಗಿದೆ. ಅದರಂತೆ ಪ್ರಸಕ್ತ ಮುಂಗಾರಿನಲ್ಲಿ ಸುಮಾರು 2000 ಹೆಕ್ಟೇರ್ ಪ್ರದೇಶಕ್ಕೆ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯಡಿ ತೊಗರಿ ಕಿರು ಚೀಲ ವಿತರಣೆ ಕಾರ್ಯಕ್ರಮ ಬಂದಿದ್ದು, ಅದರಂತೆ ಈ ಗ್ರಾಮದಲ್ಲಿ ವಿತರಣೆ ಮಾಡುತ್ತಿದ್ದೇವೆ. ರೈತರು ಯೋಜನೆಯ ಕುರಿತು ಇಲಾಖೆಯೊಂದಿಗೆ ತಾಂತ್ರಿಕ ಮಾಹಿತಿ ಪಡೆದು, ವೈಜ್ಞಾನಿಕವಾಗಿ ರಸಗೊಬ್ಬರ ಬಳಕೆ ಮಾಡಿಕೊಂಡು ಉತ್ಪಾದನೆ ಹೆಚ್ಚಿಸಿಕೊಳ್ಳಬೇಕು ಎಂದು ಲಿಂಗಣ್ಣ ಸಲಹೆ ನೀಡಿದರು.

ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷ ಅಣಬೇರು ಜೀವನಮೂರ್ತಿ ಮಾತನಾಡಿ, ಆಧುನಿಕ ಬೇಸಾಯ ಪದ್ಧತಿಯಿಂದ ಏಕ ಬೆಳೆ, ಕೇವಲ ರಾಸಾಯನಿಕ ಗೊಬ್ಬರ ಬಳಕೆ, ಅತಿಯಾದ ಕೀಟನಾಶಕ ಬಳಕೆ ಮಾಡುತ್ತಿರುವುದರಿಂದ ಇಂದು ರೋಗಯುಕ್ತ, ಒತ್ತಡಯುಕ್ತ ಜೀವನ ಹಾಗೂ ಸಾಲದ ಸುಳಿಯಲ್ಲಿ ರೈತ ಸಿಲುಕಿಕೊಂಡಿದ್ದಾನೆ. ಅದರಿಂದ ಹೊರ ಬರಲು ಏಕ ಬೆಳೆ ಬದಲು ಅಂತರ ಬೆಳೆ ಅಥವಾ ಬಹು ಬೆಳೆ ಬೆಳೆಯಬೇಕು ಎಂದು ಅವರು ರೈತರಿಗೆ ಮನವಿ ಮಾಡಿದರು.

ಉಪ ಕೃಷಿ ನಿರ್ದೇಶಕ ತಿಪ್ಪೇಸ್ವಾಮಿ ಮಾತನಾಡಿ, ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯಡಿ ವಿತರಿಸುತ್ತಿರುವ ಟಿಎಸ್3ಆರ್ ಕಿರುಚೀಲದ ತೊಗರಿ ತಳಿ ವೈಜ್ಞಾನಿಕ ವಿವರಗಳನ್ನು ಮತ್ತು ಅದರ ನಿರ್ವಹಣೆ ಬಗ್ಗೆ ಮಾಹಿತಿ ನೀಡಿ ತಾವು ಉತ್ತಮವಾಗಿ ಈ ಹಂಗಾಮಿನಲ್ಲಿ ಬೆಳೆದು ಅದೇ ಬೀಜಗಳನ್ನು ಮುಂದಿನ ಮೂರು ಹಂಗಾಮಿಗೆ ಬಳಕೆ ಮಾಡಿಕೊಳ್ಳಬಹುದು. ಇದರಿಂದ ಬಿತ್ತನೆ ಬೀಜಕ್ಕಾಗಿ ಇಲಾಖೆ ಅಥವಾ ಅಂಗಡಿಗಳ ಬಾಗಿಲಿಗೆ ಅಲೆದಾಡುವುದನ್ನು ತಪ್ಪಿಸಬಹುದು.

ಮೆಕ್ಕೆಜೋಳದಲ್ಲಿ ತೊಗರಿ ಬೆಳೆಯನ್ನು ಅಂತರ ಬೆಳೆಯನ್ನಾಗಿ ಬೆಳೆಯುವುದರಿಂದ ಮೆಕ್ಕೆಜೋಳದ ಇಳುವರಿಯಲ್ಲಿ ಬದಲಾವಣೆ ಯಾಗುವುದಿಲ್ಲ. ಜೊತೆಗೆ ಹೆಚ್ಚುವರಿಯಾಗಿ 2 ರಿಂದ 3 ಕ್ವಿಂಟಾಲ್ ಪ್ರತಿ ಎಕರೆಗೆ ತೊಗರಿ ಉತ್ಪಾದನೆಯಾಗುವುದರಿಂದ ಪ್ರಸ್ತುತ ದರಕ್ಕೆ ಹೋಲಿಸಿದಲ್ಲಿ ಸುಮಾರು 10 ಸಾವಿರದಿಂದ 12 ಸಾವಿರ ರೂ. ಹೆಚ್ಚುವರಿ ಆದಾಯ ಪಡೆಯಬಹುದಾಗಿದ್ದು, ಆದಾಯದ ಜೊತೆಗೆ ಮಣ್ಣಿನ ಫಲವತ್ತತೆ ಹೆಚ್ಚಿಸಬಹುದು ಎಂದು ತಿಳಿಸಿದರು.

ತಾ.ಪಂ. ಮಾಜಿ ಉಪಾಧ್ಯಕ್ಷ ನಾಗರಾಜ್, ಮಾಯಕೊಂಡ ಗ್ರಾಮದ ಗಣ್ಯರಾದ ದೇವೇಂದ್ರಪ್ಪ, ಗ್ರಾಮ ಪಂಚಾಯಿತಿ ಸದಸ್ಯರು, ಸಹಾಯಕ ಕೃಷಿ ನಿರ್ದೇಶಕ ಹೆಚ್.ಕೆ. ರೇವಣಸಿದ್ದನಗೌಡ, ಕೃಷಿ ಅಧಿಕಾರಿ ಆರ್.ವಿ. ತೇಜವರ್ಧನ್ ಪ್ರಗತಿ ಪರ ರೈತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

**ದಾವಣಗೆರೆ ತಾಲ್ಲೂಕಿನಲ್ಲಿ ಸುಮಾರು 29,000 ಹೆಕ್ಟೇರ್ ಪ್ರದೇಶದಲ್ಲಿ ಮೆಕ್ಕೆಜೋಳ ಬೆಳೆ ಬೆಳೆಯುತ್ತಿದ್ದು, ಅದರಲ್ಲಿ ಸಾಮಾನ್ಯವಾಗಿ ಶೇ.90 ರಷ್ಟು ಜನರು ಏಕ ಬೆಳೆ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ. ಅಲ್ಲದೇ ಪ್ರತಿ ವರ್ಷ ಅದೇ ಮೆಕ್ಕೆಜೋಳ ಬೆಳೆಯನ್ನು ಯಾವುದೇ ಬೆಳೆ ಪರಿವರ್ತನೆ ಮಾಡದೇ ಬೆಳೆಯುತ್ತಿರುವುದು ಬೇಸರ ಸಂಗತಿ.**

**- ಪ್ರೊ. ಲಿಂಗಣ್ಣ,**
**ಶಾಸಕರು, ಮಾಯಕೊಂಡ ಕ್ಷೇತ್ರ**

**ಈ ಭಾಗದ ರೈತರು ಮೊದಲಿನಿಂದಲೂ ಶೇಂಗಾ, ಅವರೆ, ರಾಗಿ, ಅಲಸಂದೆ, ಹತ್ತಿ ಬೆಳೆಗಳನ್ನು ಬೆಳೆಯುತ್ತಿದ್ದರು. ಹಾಗೂ ಅವುಗಳನ್ನೇ ತಮ್ಮ ಮುಖ್ಯ ಆಹಾರ ಭಾಗವಾಗಿ ಮಾಡಿಕೊಂಡಿದ್ದರಿಂದ ನಮ್ಮ ಹಿರಿಯರು ರೋಗ ರಹಿತ, ಒತ್ತಡ ರಹಿತ ಜೀವನ ಮಾಡಿದ್ದನ್ನು ಕಂಡಿದ್ದೇವೆ.**

**- ಅಣಬೇರು ಜೀವನಮೂರ್ತಿ,**
**ಅಧ್ಯಕ್ಷ ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿ.**

## ಕೊರೊನಾ ನಿವಾರಣೆಗೆ ಪ್ರಾರ್ಥಿಸಿ, ದುಗ್ಗಮ್ಮ ದೇವಿಗೆ ಬುತ್ತಿ ಪೂಜೆ



ದಾವಣಗೆರೆ, ಜೂ.2- ಮಹಾಮಾರಿ ಕೊರೊನಾ ಸೋಂಕು ನಿವಾರಣೆಗಾಗಿ ಪ್ರಾರ್ಥಿಸಿ, ನಗರದ ಕೆ.ಬಿ.ಬಡಾವಣೆಯ ದೀಕ್ಷಿತ್ ರಸ್ತೆಯ ಶ್ರೀ ರಾಘವೇಂದ್ರ ಸ್ವಾಮಿ ಮಠದ ವತಿಯಿಂದ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನದಲ್ಲಿ ಶ್ರೀ ದೇವಿಗೆ ನಿನ್ನೆ ಬುತ್ತಿ ಪೂಜೆಯನ್ನು ನೆರವೇರಿಸಲಾಯಿತು. ವಾಚ್ಚಸ್ಪತಿ ಆಚಾರ್, ಕೊಸ ಪ್ರಸನ್ನಕುಮಾರ್, ಶ್ರೀನಿವಾಸ್ ಅವರುಗಳು ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಚಿತ್ರಮಂದಿರದ ಕಾರ್ಮಿಕರಿಗೆ ಮೋತಿ ರಾಜೇಂದ್ರರಿಂದ ದಿನಸಿ ಕಿಟ್



ದಾವಣಗೆರೆ, ಜೂ. 2 - ನಗರ ವ್ಯಾಪ್ತಿಯ ಚಿತ್ರಮಂದಿರಗಳಲ್ಲಿ ಕೆಲಸ ಮಾಡುತ್ತಿರುವ ನೂರಕ್ಕೂ ಹೆಚ್ಚು ಕಾರ್ಮಿಕ ಕುಟುಂಬಗಳಿಗೆ ಚಿತ್ರ ನಿರ್ಮಾಪಕ ಯಜಮಾನ್ ಮೋತಿ ರಾಜೇಂದ್ರ ಅವರು ದಿನಸಿ ಕಿಟ್‌ಗಳನ್ನು ವಿತರಿಸಿದರು.


ತಮ್ಮ ಪ್ರೊಡಕ್ಷನ್ ಸಂಸ್ಥೆಯ ಅಡಿಯಲ್ಲಿ ನಿರ್ಮಾಣವಾಗುತ್ತಿರುವ ಹೆಸರಾಂತ ನಟ ಉಪೇಂದ್ರ ನಟಿಸಿ, ತೆಲುಗಿನ ರಾಮ್ ಗೋಪಾಲ್ ವರ್ಮಾ ನಿರ್ದೇಶನದ ಇನ್ನೂ ಹೆಸರಿಡದ ಸಿನಿಮಾ ತಂಡದೊಂದಿಗೆ ರಾಜೇಂದ್ರ ಅವರು ಚಿತ್ರಮಂದಿರದ ಕಾರ್ಮಿಕರಿಗೆ ದಿನಸಿ ಕಿಟ್ ಗಳನ್ನು ತಮ್ಮ ನಿವಾಸದಲ್ಲಿ ಹಂಚಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕ ಯಜಮಾನ್ ಮೋತಿ ವೀರಣ್ಣ, ಪುತ್ರರಾದ ಆದಿತ್ಯ ಯಜಮಾನ್, ಆರ್ಯನ್ ಯಜಮಾನ್ ಮತ್ತಿತರರು ಉಪಸ್ಥಿತರಿದ್ದರು.

## ಅನರ್ಹ ಪಡಿತರ ಚೀಟಿ ಹಿಂದಿರುಗಿಸಲು ಜೂನ್ 30 ರವರೆಗೆ ಅವಕಾಶ

ದಾವಣಗೆರೆ, ಜೂ.2- ಅನರ್ಹರು ಹೊಂದಿರುವ ಪಡಿತರ ಚೀಟಿಗಳನ್ನು ಸ್ವಯಂ ಪ್ರೇರಿತರಾಗಿ ಬದಲಾಯಿಸಿಕೊಳ್ಳಲು ಈ ಹಿಂದೆ ಏಪ್ರಿಲ್ 15 ಕೊನೆಯ ದಿನಾಂಕವನ್ನಾಗಿ ನಿಗದಿಪಡಿಸಲಾಗಿತ್ತು. ಈ ಅವಧಿಯನ್ನು ಇದೀಗ ಇದೇ ದಿನಾಂಕ 30 ರವರೆಗೆ ವಿಸ್ತರಿಸಿ ಕೊನೆಯ ಅವಕಾಶ ನೀಡಲಾಗಿದೆ ಎಂದು ತಹಶೀಲ್ದಾರ್ ಗಿರೀಶ್ ತಿಳಿಸಿದ್ದಾರೆ

ಯಾವುದೇ ಪಡಿತರ ಚೀಟಿಯನ್ನು ಸ್ವಯಂ ಪ್ರೇರಿತರಾಗಿ ಬದಲಾಯಿಸಿಕೊಂಡಲ್ಲಿ ಅಂಥವರ ವಿರುದ್ಧ ಯಾವುದೇ ಕಾನೂನು ಕ್ರಮ ಅಥವಾ ದಂಡ ವಸೂಲಿ ಮಾಡಲಾಗುವುದಿಲ್ಲ. ಅನಧಿಕೃತವಾಗಿ ಪಡಿತರ ಚೀಟಿ ಹೊಂದಿರುವ ಕುಟುಂಬಗಳ ಮಾಹಿತಿಯನ್ನು ಸೂಕ್ತ ದಾಖಲೆ ಸಹಿತ ಆಹಾರ ಶಾಖೆಯಲ್ಲಿ ನೀಡಬಹುದಾಗಿದ್ದು, ದೂರುದಾರರ ವಿವರವನ್ನು ಗೌಪ್ಯವಾಗಿಡಲಾಗುವುದು ಎಂದು ಅವರು ಹೇಳಿದ್ದಾರೆ.

## ಸರತಿಯಲ್ಲಿ ಲಸಿಕೆ ಪಡೆದ 15ನೇ ವಾರ್ಡ್ ಪಾಲಿಕೆ ಸದಸ್ಯೆ ಆಶಾ ಉಮೇಶ್



ದಾವಣಗೆರೆ, ಜೂ.2- ನಗರ ಪಾಲಿಕೆಯ 15ನೇ ವಾರ್ಡಿನ ಸಾರ್ವ ಜನಿಕರಿಗೆ ಡಿ.ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಲಯನ್ಸ್ ಭವನದಲ್ಲಿ ಕೋವಿಡ್-19 ಲಸಿಕೆ ನೀಡಲಾಯಿತು. ಈ ವಾರ್ಡಿನ ಪಾಲಿಕೆ ಸದಸ್ಯರಾದ ಶ್ರೀಮತಿ ಆಶಾ ಉಮೇಶ್ ಅವರು ನಾಗರಿಕರೊಂದಿಗೆ ಸರತಿ ಸಾಲಿನಲ್ಲಿ ನಿಂತು ಲಸಿಕೆ ಪಡೆದುಕೊಂಡರು.

ವೈದ್ಯ ದೇವರಾಜ್, ಸಮಾಜ ಸೇವಕ ಕೆ.ಎಂ.ವೀರಯ್ಯ ಸ್ವಾಮಿ, ನಟರಾಜ್, ಪಿ.ಎಸ್. ತೀರ್ಥಶ್, ವಿನಾಯಕ, ರವಿಕುಮಾರ್, ಕಾಂಗ್ರೆಸ್ ಮುಖಂಡ ಉಮೇಶ್ (ಉಮಾಶಂಕರ್) ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಅನಾವಶ್ಯಕವಾಗಿ ರಸ್ತೆಗಿಳಿದ ವಾಹನಗಳ ವಶ ಮಾಸ್ಕ್ ಧರಿಸದ 548 ಮಂದಿಗೆ ದಂಡ

ದಾವಣಗೆರೆ, ಜೂ. 2- ಮಾಸ್ಕ್ ಧರಿಸದೇ ಓಡಾಡುತ್ತಿದ್ದವರಿಗೆ ದಂಡದ ಬಿಸಿ ಹಾಗೂ ಅನಾವಶ್ಯಕವಾಗಿ ರಸ್ತೆಗಿಳಿದ ವಾಹನಗಳನ್ನು ವಶ ಪಡೆದು ಸವಾರರಿಗೆ ಚುರುಕು ಮುಟ್ಟಿಸುವ ಕೆಲಸ ಇಂದೂ ಸಹ ನಡೆಯಿತು.

ಜಿಲ್ಲೆಯಲ್ಲಿ ಇಂದು ಮಾಸ್ಕ್ ಧರಿಸದ 548 ಮಂದಿಯಿಂದ ಒಟ್ಟು 1,10,300 ರೂ. ದಂಡ ವಿಧಿಸಲಾಗಿದೆ. ಅನಾವಶ್ಯಕವಾಗಿ ರಸ್ತೆಗಿಳಿದ 229 ವಾಹನಗಳನ್ನು ಸೀಜ್ ಮಾಡಲಾಗಿದೆ.

# ಸಿಸಿ ಸೆಂಟರ್‌ಗೆ ಶಿಫ್ಟ್ ಆಗಲು ಸೋಂಕಿತರ ಪ್ರತಿರೋಧ



**ಮಲೇಬೆನ್ನೂರಿನಲ್ಲಿ ಅಧಿಕಾರಿಗಳಿಂದ ಮನವೊಲಿಕೆ**

ಮಲೇಬೆನ್ನೂರು, ಜೂ.1- ಪಟ್ಟಣದಲ್ಲಿ ಹೋಂ ಐಸೋಲೇಷನ್‌ನಲ್ಲಿದ್ದ 10ಕ್ಕೂ ಹೆಚ್ಚು ಸೋಂಕಿತರನ್ನು ಕೋವಿಡ್ ಕೇರ್ ಸೆಂಟರ್‌ಗಳಿಗೆ ಶಿಫ್ಟ್ ಮಾಡಲು ಅಧಿಕಾರಿಗಳು ಹರಸಾಹಸ ಪಟ್ಟ ಘಟನೆ ಇಂದು ನಡೆಯಿತು.

ಇಲ್ಲಿನ 18ನೇ ವಾರ್ಡ್‌ನಲ್ಲಿದ ಸೋಂಕಿತರೊಬ್ಬರು ಸಿಸಿ ಸೆಂಟರ್‌ಗೆ ಹೋಗಲು ಪ್ರತಿರೋಧ ವ್ಯಕ್ತಪಡಿಸಿದಾಗ ಉಪತಹಶೀಲ್ದಾರ್ ಆರ್. ರವಿ, ಪುರಸಭೆ ಮುಖ್ಯಾಧಿಕಾರಿ ದಿನಕರ್, ಅಧಿಕಾರಿಗಳಾದ ಉಮೇಶ್, ಗುರುಪ್ರಸಾದ್, ಪ್ರಭು, ನವೀನ್, ಆರೋಗ್ಯ ಕೇಂದ್ರದ ಕಿರಣ್, ಪ್ರೊಬೇಷನರಿ ಪಿಎಸ್ಐ ಶರಣಬಸಪ್ಪ ಅವರು ಅರ್ಧ ಗಂಟೆಗೂ ಹೆಚ್ಚು ಕಾಲ ಅವರ ಮನವೊಲಿಸಲು ಪ್ರಯತ್ನಿಸಿದರು.

ಅಂತಿಮವಾಗಿ ಒಪ್ಪಿಕೊಂಡ ಸೋಂಕಿತರು, ನಾವು ನಮ್ಮ ವಾಹನದಲ್ಲೇ ಸಿಸಿ ಸೆಂಟರ್‌ಗೆ ಹೋಗುತ್ತೇವೆಂದು ಹೇಳಿ ತೆರಳಿದರು. ಪಟ್ಟಣದಲ್ಲಿ ಪಾಸಿಟಿವ್ ಕೇಸ್ ಇಳಿಮುಖವಾಗುತ್ತಿದ್ದು, ಇಂತಹ ಸಂದರ್ಭದಲ್ಲಿ ಸೋಂಕಿತರು ಹೋಂ ಐಸೋಲೇಷನ್‌ಲ್ಲಿರುವುದರಿಂದ ಸೋಂಕು ಮನೆಯಲ್ಲಿರುವ ಇತರರಿಗೂ ಹರಡುವ ಸಾಧ್ಯತೆ ಇರುತ್ತದೆ. ಹಾಗಾಗಿ ನಾವು ಸೋಂಕಿತರನ್ನು ಸಿಸಿ ಸೆಂಟರ್‌ಗಳಿಗೆ ಶಿಫ್ಟ್ ಮಾಡಲೇಬೇಕಿದೆ ಎಂದು ಪುರಸಭೆ ಮುಖ್ಯಾಧಿಕಾರಿ ದಿನಕರ್ ಸ್ಪಷ್ಟಪಡಿಸಿದರು.

**97 ಕೇಸ್:** ಬುಧವಾರ ಬೆಳಗಿನ ವರದಿ ಪ್ರಕಾರ ಹರಿಹರ ತಾಲ್ಲೂಕಿನಲ್ಲಿ 97 ಜನರಿಗೆ ಪಾಸಿಟಿವ್ ದೃಢಪಟ್ಟಿದೆ. ಮಲೇಬೆನ್ನೂರಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಇಂದು 33 ಜನರಿಗೆ ಕೋವಿಡ್ ಟೆಸ್ಟ್ ಮಾಡಿದ್ದು, ಇಬ್ಬರಿಗೆ ಮಾತ್ರ ಪಾಸಿಟಿವ್ ಬಂದಿದೆ ಎಂದು ವೈದ್ಯಾಧಿಕಾರಿ ಡಾ. ಲಕ್ಷ್ಮೀದೇವಿ ತಿಳಿಸಿದರು.

## ಮೇ ತಿಂಗಳಲ್ಲಿ ದೇಶದ ರಫ್ತು ಶೇ.67.39ರಷ್ಟು ಹೆಚ್ಚಳ

ನವದೆಹಲಿ, ಜೂ. 2 - ಮೇ ತಿಂಗಳಲ್ಲಿ ದೇಶದ ರಫ್ತು ಶೇ.67.39ರಷ್ಟು ಹೆಚ್ಚಾಗಿ 32.21 ಶತಕೋಟಿ ಡಾಲರ್‌ಗಳಿಗೆ ತಲುಪಿದೆ. ಇಂಜಿನಿಯರಿಂಗ್, ಪೆಟ್ರೋಲಿಯಂ ಉತ್ಪನ್ನ ಹಾಗೂ ಆಭರಣ ಮತ್ತು ಹರಳುಗಳ ರಫ್ತು ಹೆಚ್ಚಾಗಿದೆ ಎಂದು ಸರ್ಕಾರಿ ಅಂಕಿ-ಅಂಶಗಳು ತಿಳಿಸಿವೆ.

ಕಳೆದ ವರ್ಷ ಮೇ ತಿಂಗಳಲ್ಲಿ ರಫ್ತು 19.24 ಶತಕೋಟಿ ಡಾಲರ್ ಆಗಿತ್ತು. 2019ರ ಮೇ ತಿಂಗಳಲ್ಲಿ 29.85 ಶತಕೋಟಿ ಡಾಲರ್‌ಗಳ ರಫ್ತಾಗಿತ್ತು ಎಂದು ವಾಣಿಜ್ಯ ಸಚಿವಾಲಯ ತಿಳಿಸಿದೆ.

ಮೇ ತಿಂಗಳಲ್ಲಿ ಆಮದು ಸಹ ಶೇ.68.54ರಷ್ಟು ಹೆಚ್ಚಾಗಿ 38.53 ಶತಕೋಟಿ ಡಾಲರ್‌ಗಳಿಗೆ ತಲುಪಿದೆ. ಮೇ 2020ರಲ್ಲಿ ಆಮದು 22.86 ಶತಕೋಟಿ ಡಾಲರ್ ಆಗಿತ್ತು. ಮೇ ತಿಂಗಳ ಒಟ್ಟಾರೆ ವಿನಿಮಯ ಕೊರತೆ 6.32 ಶತಕೋಟಿ ಡಾಲರ್ ಆಗಿದೆ.

## ಕೊರೊನಾ ಶಮನಕ್ಕೆ ವಿಶ್ವಂಭರ ಸ್ವಾಮಿಗೆ ಪೂಜೆ



ದಾವಣಗೆರೆ, ಜೂ. 2 - ನಗರದ ಕೆ.ಬಿ. ಬಡಾವಣೆ ದೀಕ್ಷಿತ್ ರಸ್ತೆಯ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ಕಳೆದ 30 ದಿನಗಳಿಂದ 'ಗುರುರಾಯರ ಪ್ರಸಾದ' ಎಂಬ ಅನ್ನದಾನದ ಕಾರ್ಯಕ್ರಮವನ್ನು ನಡೆಸಲಾಗುತ್ತಿದ್ದು, ಈವರೆಗೂ ಸುಮಾರು 25 ಸಾವಿರ ಆಹಾರದ ಪೊಟ್ಟಣಗಳನ್ನು ಕೊರೊನಾ ಸೋಂಕು ಪೀಡಿತರಿಗೆ ಹಾಗೂ ವೈದ್ಯಕೀಯ ಸಿಬ್ಬಂದಿಗಳಿಗೆ ನೀಡಲಾಗಿದೆ.

ಕೊರೊನಾ ಬಾಧೆಯು ಶೀಘ್ರ ಉಪಶಮನವಾಗಲೆಂದು ಶ್ರೀ ವಿಶ್ವಂಭರ ಸ್ವಾಮಿಗೆ ಇಂದು 108 ತೆಂಗಿನಕಾಯಿ ಸಹಿತ ಅಷ್ಟದ್ರವ್ಯದಿಂದ ಆಹುತಿ ಸಮರ್ಪಣೆ ಮಾಡಿ, ಪ್ರಾರ್ಥಿಸಲಾಯಿತು.

ಜವಳಿ ಉದ್ಯಮಿ ಬಿ.ಸಿ.ಉಮಾಪತಿ, ನಗರಪಾಲಿಕೆ ಮಹಾಪೌರ ಎಸ್.ಟಿ. ವೀರೇಶ್, ಕೆ. ಎಲ್. ಆಚಾರ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಎರಡನೇ ಅಲೆಯಲ್ಲಿ 594 ವೈದ್ಯರ ಸಾವು

ನವದೆಹಲಿ, ಜೂ. 2 – ಕೊರೊನಾದ ಎರಡನೇ ಅಲೆಯಲ್ಲಿ 594 ವೈದ್ಯರು ಸಾವನ್ನಪ್ಪಿದ್ದಾರೆ. ದೆಹಲಿಯಲ್ಲಿ ಅತಿ ಹೆಚ್ಚಿನ 107 ವೈದ್ಯರು ಸಾವನ್ನಪ್ಪಿರುವುದಾಗಿ ಇಂಡಿಯನ್ ಮೆಡಿಕಲ್ ಅಸೋಸಿ ಯೇಷನ್ (ಐ.ಎಂ.ಎ.) ತಿಳಿಸಿದೆ.

ಮೊದಲ ಅಲೆಯಲ್ಲಿ 748 ವೈದ್ಯರು ಸಾವನ್ನಪ್ಪಿದ್ದರು ಎಂದು ಐ.ಎಂ.ಎ. ಹೇಳಿದೆ 2ನೇ ಅಲೆಯಲ್ಲಿ ಬಿಹಾರದಲ್ಲಿ 96, ಉತ್ತರ ಪ್ರದೇಶದಲ್ಲಿ 67, ರಾಜಸ್ಥಾನದಲ್ಲಿ 43, ಜಾರ್ಖಂಡ್‌ನಲ್ಲಿ 39 ಹಾಗೂ ಆಂಧ್ರ ಪ್ರದೇಶ ಮತ್ತು ತೆಲಂಗಾಣದಲ್ಲಿ ತಲಾ 32 ವೈದ್ಯರು ಸಾವನ್ನಪ್ಪಿದ್ದಾರೆ ಎಂದು ಐ.ಎಂ.ಎ. ದಾಖಲೆಗಳು ತಿಳಿಸಿವೆ.

**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ : 26.05.2021ರ ಬುಧವಾರ ನಿಧನರಾದ
**ಶ್ರೀ ಕೆ.ಬಿ. ಸುರೇಶ್** (ಕಾರ್ಯದರ್ಶಿ, ಹಾಲಿನ ಡೈರಿ)
ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಇವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುವ
ಕಮದೋಡು ವಂಶಸ್ಥರು ಹಾಗೂ ಬಂಧು-ಮಿತ್ರರು, ಕುಣೇಬೆಳಕೆರೆ.

**ಪ್ರಥಮ ವರ್ಷದ ಪುಣ್ಯಸ್ಮರಣೆ**



**ಶ್ರೀ ಗಣೇಶ್ ರಾವ್ ಎನ್. ಪುಟಾಣಕರ್**
ಮಾಲೀಕರು : ಬಾಂಬೆ ಸೆಲೆಕ್ಷನ್ ದಾವಣಗೆರೆ.
ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು
ನಿಮ್ಮ ನೆನಪು, ನಿಮ್ಮ ಶ್ರೇಷ್ಠ ಸಂಸ್ಕಾರ, ಶಿಸ್ತು, ಆದರ್ಶ ನಮ್ಮೆಲ್ಲರ ಪಾಲಿಗೆ ದಾರಿ ದೀಪವಾಗಿದೆ.
**ಪತ್ನಿ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಜ್ಜಿಮನೆ ಬಂಧು–ಮಿತ್ರರು**
ಪ್ರಥಮ ವರ್ಷದ ಪುಣ್ಯ ಸ್ಮರಣಾರ್ಥವಾಗಿ ಶ್ರೀ ಭಾವಸಾರ ಕ್ಷತ್ರಿಯ ತರುಣ ಮಂಡಳಿ ಇವರ ಸಹಯೋಗದೊಂದಿಗೆ ಸಮಾಜದ ಬಡ ಕುಟುಂಬಗಳಿಗೆ ಆಹಾರ ಧಾನ್ಯಗಳ ಕಿಟ್‌ಗಳನ್ನು ವಿತರಿಸಲಾಯಿತು.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte